ಇ) ವಾಪಸ್ಸು ಮಾಡಿದ ಜಮೀನಿನ ಭೂ ಸ್ವಾಧೀನ ಶುಲ್ಕವನ್ನು ಭೂಮಾಲೀಕರಿಂದ ವಸೂಲು ಮಾಡಲಾಗಿದೆಯೇ?

ಈ) ಜಮೀನು ವಾಪಸ್ಸು ಕೊಡುವ ಸಂದರ್ಭದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಅನಂತನಾಗ್(ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):- (ಅ) ಈಗಾಗಲೇ ಒಟ್ಟು 15,215 ನಿವೇಶನಗಳನ್ನು ರೀಕನ್ವೆ ಮಾಡಿದೆ ಹಾಗೂ ಸ್ವಾಧೀನ ಪತ್ರಗಳನ್ನು ನೀಡಲಾಗಿದೆ.

(ಆ) ರಾಜ್ಯ ಉಚ್ಚ ನ್ಯಾಯಾಲವು 1986ರಲ್ಲಿ ರೀಕನ್ವೆಮಾಡುವ ಕ್ರಮವನ್ನು ರದ್ದುಪಡಿಸಿದ ಕಾರಣದಿಂದ ದಿನಾಂಕ: 8-5-86ರಿಂದ ದಿನಾಂಕ: 31-3-94ರವರೆಗೆ ಈ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ನಿವೇಶನಗಳನ್ನು ರೀಕನ್ವೆ ಮಾಡಲು ಅನುವಾಗುವಂತೆ ಕಲಂ 38 ಪಿ.ಯಡಿಯಲ್ಲಿ ಕಾಯ್ದೆಗೆ ದಿನಾಂಕ: 31-3-1991ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿದೆ. ಕಾಯ್ದೆಗೆ ತಿದ್ದುಪಡಿ ಮಾಡಿದ ದಿನಾಂಕದಿಂದ ಅಂದರೆ ದಿನಾಂಕ: 31-3-94ರಿಂದ 2518 ಪ್ರಕರಣಗಳಲ್ಲಿ ರೀಕನ್ವೆಮಾಡಲಾಗಿದೆ.

(ಇ) ಹೌದು -

(ಈ) ಯಾವುದೇ ನಿರ್ದಿಷ್ಟ ದೂರುಗಳು ಬಂದಿರುವುದಿಲ್ಲ.

ಅಧ್ಯಕ್ಷರು:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಮೂರನೇ ಪಟ್ಟಿಯ ಪ್ರಶ್ನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕಾವೇರಿ ನೀರಿನ ವಿಚಾರದಲ್ಲಿ ಅವರ ಪಕ್ಷದ ಮೀಟಿಂಗ್‌ನಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡು ಅವರ ಪಕ್ಷದ ಸೆಕ್ರೇಟರಿಯವರು ಈಗಾಗಲೇ ಅನೌನ್ಸ್ ಮಾಡಿದ್ದಾರೆ, ಏನೆಂದರೆ "Chief Minister J.H.Patel has decided to release 5 TMC of water to Tamil Nadu as against the demand of 15 TMC of water from them. Mr. Patel said, during July the State needed to release 48 TMC of water. In view of the poor storage of water levels in the reservoirs, the State would be able to release only 5 TMC". . . . ಇಲ್ಲಿ ಅವರು ರಿಲೀಸ್ ಮಾಡಿ ಎಂದು ಹೇಳಿ ಸದನದಲ್ಲಿ ರೆಫ್ಯೂಸ್ ಮಾಡುತ್ತೇನೆ ಎಂದು ಹೇಳಿದರೆ It is breach of privilege. ನೀರು ಎಷ್ಟು ಬಿಟ್ಟಿದ್ದಾರೆ ಎಂದರೆ ಅವರು ಹೇಳಲು ತಯಾರಾಗಿಲ್ಲ. ಬಿಡುತ್ತಿರುವ ನೀರನ್ನು ಸ್ಟಾಪ್ ಮಾಡಿ ಎಂದರೆ ಅದಕ್ಕೂ ತಯಾರಿಲ್ಲ. ಒಂದು ಕಡೆ ಸ್ಟೇಟ್‌ಮೆಂಟ್ ಕೊಡುತ್ತಾರೆ, ಮಾನ್ಯ ಅಧ್ಯಕ್ಷರ ಗಮನಕ್ಕೆ ಅದನ್ನು ತರುತ್ತೇನೆ, ತಾವು ಅದನ್ನು ನೋಡಬಹುದು. ನೀರು ಬಿಡುತ್ತೇವೆಂದು ಹೇಳಿದ್ದಾರೆ, ಎಷ್ಟು ಎಂದರೆ ಹೇಳುವುದಿಲ್ಲ. . . . .

ಅಧ್ಯಕ್ಷರು:- ಶ್ರೀಶೈಲಪ್ಪ ಬಿದರೂರು ಇವರು ವಿಷಯ ಸಮಿತಿಯ ವರದಿಯನ್ನು ಒಪ್ಪಿಸುವುದು.

(ಗೈರು ಹಾಜರು)

ವಿಷಯ:- ಸಮಿತಿಗಳ ವರದಿಗಳನ್ನೊಪ್ಪಿಸುವುದು

ಅಧ್ಯಕ್ಷರು:- ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖಾ ವಿಷಯ ಸಮಿತಿಯ 1996-97ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ನಾನು ಒಪ್ಪಿಸುತ್ತಾ ಇದ್ದೇನೆ.

ಶ್ರೀ ಡಿ.ಮಂಜುನಾಥ (ಅಧ್ಯಕ್ಷರು, ಆರ್ಥಿಕ, ಸಾಂಖ್ಯಿಕ ಹಣಕಾಸು, ಸಾಂಖ್ಯಿಕ, ಯೋಜನೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳ ವಿಷಯ ಸಮಿತಿ):- ಮಾನ್ಯ ಅಧ್ಯಕ್ಷರೇ, ಆರ್ಥಿಕ, ಸಾಂಖ್ಯಿಕ ಹಣಕಾಸು, ಸಾಂಖ್ಯಿಕ, ಯೋಜನೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳ 1996-97ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸದನದ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು:- ವರದಿಯನ್ನು ಒಪ್ಪಿಸಲಾಯಿತು.

ಶ್ರೀ ಬಿ.ಬಿ.ಶಿವಪ್ಪ(ಅಧ್ಯಕ್ಷರು, ಲೋಕೋಪಯೋಗಿ ಮತ್ತು ನೀರಾವರಿ ಇಲಾಖಾ ವಿಷಯ ಸಮಿತಿ):- ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳ 1996-97ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು:- ವರದಿಯನ್ನು ಒಪ್ಪಿಸಲಾಯಿತು. ಈಗ ಗಮನ ಸೆಳೆಯುವ ಸೂಚನೆ. . . . .

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ನಾನು ಎತ್ತಿದಂಥ ಪ್ರಶ್ನೆಗೆ ಸರಕಾರದವರು ಉತ್ತರ ಕೊಡುವುದಿಲ್ಲವೆಂದರೆ ಇದು ಆಶ್ಚರ್ಯ.

ಅಧ್ಯಕ್ಷರು:- ಅವರು ಉತ್ತರ ಕೊಡುವುದಿಲ್ಲವೆಂದು ಹೇಳಲಿಲ್ಲ. . . . . .

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈಗ ಅವರು ಒಂದು ಹೇಳಿಕೆಯನ್ನು ಕೊಟ್ಟ ಮೇಲೆಯೂ ಕೂಡ, ಈ ಸದನದಲ್ಲಿ ಅದನ್ನು ಹೇಳಲು ನಾಚಿಕೊಳ್ಳುತ್ತಾರೆ ಅಂದರೆ ಹೀಗೆ ಏಕೆ ಎನ್ನತಕ್ಕಂಥ ಪ್ರಶ್ನೆ ಬರುತ್ತದೆ. ಈಗಾಗಲೇ ಈ ಹೇಳಿಕೆಯನ್ನು ಹೊರಗಡೆ ಅವರು ಕೊಟ್ಟಿದ್ದಾರೆ. ತಮಿಳುನಾಡಿಗೆ ಐದು ಟಿ.ಎಂ.ಸಿ. ನೀರನ್ನು ಬಿಡುತ್ತೇವೆ. ಇದಕ್ಕೆ ನಮ್ಮ ಪಾರ್ಟಿಯು ಕೂಡ ಒಪ್ಪಿಕೊಂಡಿದೆ ಎಂದು ಹೇಳಿದ್ದರೂ ಕೂಡ ಈ ಸದನದಲ್ಲಿ ನಾವು ನೀರು ಬಿಟ್ಟಿದ್ದೇವೆ.

ಅಧ್ಯಕ್ಷರು:- ಒಂದು ಗಂಟೆಯ ಕಾಲ ನಡೆಯಬೇಕಾದ ಪ್ರಶ್ನೋತ್ತರವನ್ನು ಮುಂದಕ್ಕೆ ಹಾಕಬೇಕೆ? ನಡೆಸಬೇಕೆ? ಎಂಬ ವಿಚಾರದಲ್ಲಿ ಒಂದೂವರೆ ಗಂಟೆ ಕಾಲ ತಮಗೆಲ್ಲರಿಗೂ ವಿಫುಲವಾದ ಅವಕಾಶ ಕೊಟ್ಟು ಚರ್ಚೆ ಮಾಡಿ ನಾನು ನಿಮಗೆ ಹೇಳಿದ್ದು, ಐದು-ಹತ್ತು ನಿಮಿಷ ಬನ್ನಿ, ಕ್ವೆಶ್ಚನ್ ಅವರನ್ನು ನಾವು ಸಸ್ಪೆಂಡ್ ಮಾಡಬೇಕೆ? ಅಥವಾ ಹಾಗೆಯೇ ಮುಂದುವರಿಸಿಕೊಂಡು ಹೋಗಬೇಕೆ? ಎಂಬುದನ್ನು ಚರ್ಚೆ ಮಾಡಿಕೊಂಡು ಇಲ್ಲಿಗೆ ಬರೋಣ ಎಂದು ಹೇಳಿದರೆ, ಅದಕ್ಕೂ ಅವಕಾಶ ಕೊಡದೆ ಮೂರು ದಿನಗಳ ಸಭೆ ನಡೆದುದರಲ್ಲಿ ಎರಡು ದಿನಗಳ ಕ್ವೆಶ್ಚನ್ ಅವರನ್ನು ಸಸ್ಪೆಂಡ್ ಮಾಡಿಕೊಂಡಿದ್ದೇವೆ. ಕ್ವೆಶ್ಚನ್ ಅವರ್ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಹೋದ ವರ್ಷವೂ ಡಿಮಾಂಡ್ಸ್‌ನ್ನು ಡಿಸ್‌ಕಶನ್ ಮಾಡುವುದಕ್ಕೆ ಆಗಲಿಲ್ಲ. ಪ್ರತಿ ದಿವಸವೂ ವಿಶೇಷ, ಗಂಭೀರ ಎಂದು ಹೇಳುತ್ತೀರಿ, ಆದರೆ ಗಂಭೀರತೆ ಇಲ್ಲ, ಪರಿಸ್ಥಿತಿಯು ಬಹಳ ಚೆನ್ನಾಗಿಯೇ ಇದೆ, ಇದು ಅಪ್ರಮುಖವಾದ ವಿಚಾರ ಎಂದು ನಾನು ಹೇಳುತ್ತಾ ಇಲ್ಲ. ನಿಯಮಾವಳಿಗಳ ಪ್ರಕಾರ ನೋಟೀಸನ್ನು ಕೊಟ್ಟಿದ್ದೀರಿ, ಕ್ವೆಶ್ಚನ್ ಅವರ್ ಆದ ಮೇಲೆ ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳಿದ್ದೇನೆ. ಹೀಗೆ ಪ್ರತಿಯೊಂದು ಸಲವೂ ಕೂಡ

ಕಗ್ಗಂಟು ಹಾಕಿಕೊಂಡು ಪ್ರತಿಷ್ಠೆ ವಿಚಾರ ಮಾಡಿಕೊಂಡು ಹೀಗೆ ಮಾಡಿದರೆ ಹೇಗೆ? ನನಗೆ ಇಡೀ ಸದನದ ಸದಸ್ಯರ ಜವಾಬ್ದಾರಿ ಇದೆ. ಹೊಸದಾಗಿ ಬಂದಿರತಕ್ಕಂಥ ಸದಸ್ಯರು, ಎಲ್ಲಾ ಪಕ್ಷಗಳಲ್ಲಿಯೂ ನೂತನವಾಗಿ ಆಯ್ಕೆಯಾಗಿ ಬಂದಿರತಕ್ಕಂಥ ಸದಸ್ಯರುಗಳು ಕಳುಹಿಸಿರತಕ್ಕಂಥ ಪ್ರಶ್ನೆಗಳು ಇವೆ. ನಾನು ಯಾವರೀತಿ ಮುಖ ಇಟ್ಟುಕೊಂಡು ಸಮಾಜಕ್ಕೆ ತೋರಿಸಬೇಕೆಂದು ಹೇಳಿ? ಸದನದಲ್ಲಿ ಪ್ರತಿಸಾರಿಯೂ ಈ ರೀತಿಯ ಆವೇಶಕ್ಕೆ ಒಳಗಾಗಿ ಕಲಾಪಗಳನ್ನು ನಡೆಸಲು ಆಗುತ್ತಾ ಇಲ್ಲ ಎಂದು ಹೇಳಿದರೆ ನನ್ನ ಮನಸ್ಸಿಗೆ ಎಷ್ಟು ನೋವು ಆಗುತ್ತದೆ ಹೇಳಿ? ನಾನು ಏನು ಇದು ಮಾಡಿಕೊಂಡು ಹೋಗಬೇಕೆಂದೇನೂ ಇಲ್ಲ. ನನಗೆ ಎಷ್ಟು ದುಃಖವಾಗುತ್ತದೆ ಹೇಳಿ? ಇವೊತ್ತು ಪ್ರಮುಖವಾದ 16 ಪ್ರಶ್ನೆಗಳನ್ನು ಕಳುಹಿಸಿರುತ್ತಾರೆ. ಸದಸ್ಯರು ಹಾಜರಿರುತ್ತಾರೆ, ಸದನದಲ್ಲಿ ಹಾಜರಿದ್ದೂ ಕೂಡ ಪ್ರಶ್ನೆಗಳನ್ನು ಕೇಳುವುದಿಲ್ಲ ಅಂದರೆ ತಾವೇ ಹೇಳಿ ಸಭೆಯನ್ನು ಹೇಗೆ ನಡೆಸಬೇಕೆಂದು? ತಾವುಗಳು ಸದನದಲ್ಲಿ ನನಗಿಂತಲೂ ಹಿರಿಯರು. ತಾವೇ ಹೇಳಿ ಸದನವನ್ನು ಹೇಗೆ ನಡೆಸುವುದು ಎಂದು ನನ್ನ ಮನಸ್ಸಿಗೆ ತುಂಬಾ ನೋವು ಆಗಿದೆ. ವೈಯಕ್ತಿಕವಾಗಿ ನನ್ನ ಮನಸ್ಸಿಗೆ ನೋವಾಗುತ್ತಿದೆ ಎಂಬ ಪ್ರಶ್ನೆ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಮಗೆ ತಮ್ಮ ಮನಸ್ಸಿಗೆ ನೋವುಂಟು ಮಾಡಬೇಕೆಂಬ ಉದ್ದೇಶವೇ ಇಲ್ಲ. ದುರ್ದೈವದಿಂದ ಸರಕಾರದ ವಿರುದ್ಧ ಹೇಳಿದ ಮಾತನ್ನು ತಾವು ತಮ್ಮ ಮೈಮೇಲೆ ತೆಗೆದುಕೊಂಡಿದ್ದೀರಿ. ನಾವು ಸರಕಾರಕ್ಕೆ ಏನು ಹೇಳಿದ್ದೇವೆಂದರೆ, ಅವರು ಮಾನ್ಯ ಜೆ.ಹೆಚ್.ಪಟೇಲರು ಎದ್ದು ನಿಂತು ಏನು ಹೇಳಿದರು ಎಂದರೆ, ಅದರಲ್ಲಿ ಗಂಭೀರವಾದ ಕೆಲವು ವಿಷಯಗಳು ಇವೆ, ರಾಜ್ಯದ ಹಿತದೃಷ್ಟಿಯಿಂದ ಅದನ್ನು ಇಲ್ಲಿ ಹೇಳತಕ್ಕಂಥಾದ್ದು ಸೂಕ್ತವಲ್ಲ, ನೀವು ಅವರ ಕೊಠಡಿಗೆ ಬನ್ನಿ ನಾನು ಅಲ್ಲಿ ಹೇಳುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ ಮೇಲೆ ನೀವು ನೀರು ಬಿಡತಕ್ಕಂಥಾದ್ದನ್ನು ನಿಲ್ಲಿಸಿ, ಆ ಮೇಲೆ ನಾವು ಮಾತನಾಡೋಣ ಎಂದು ಹೇಳಿದ್ದೇವೆ.

ಅಧ್ಯಕ್ಷರು:- ನಾನು ವಿನಂತಿ ಮಾಡಿಕೊಂಡಿರುವುದೇನೆಂದರೆ, ಕ್ವೆಶ್ಚನ್ ಅವರನ್ನು ಸಸ್ಪೆಂಡ್ ಮಾಡಿ ಈ ಮೋಷನ್‌ನ್ನು ಈಗಲೇ ಚರ್ಚೆಗೆ ತೆಗೆದುಕೊಳ್ಳಬೇಕೆ? ಅಥವಾ ಕ್ವೆಶ್ಚನ್ ಅವರನ್ನು ಮುಗಿಸಿ ಅನಂತರ ತೆಗೆದುಕೊಳ್ಳಬೇಕೆ ಎಂಬ ವಿಚಾರವನ್ನು ಮಾತನಾಡೋಣ ಒಂದೈವತ್ತು ನಿಮಿಷ ಬನ್ನಿ ಎಂದು ಹೇಳಿದ್ದೆ. ನಾನು ತಮ್ಮನ್ನು ಕರೆದಿದ್ದು ಆ ಕಾರಣಕ್ಕಾಗಿ. ಆದರ ಕಡೆಗೆ ನೀವುಗಳು ಲಕ್ಷ್ಯವನ್ನೇ ಕೊಡಲಿಲ್ಲ. ಕ್ವೆಶ್ಚನ್ ಅವರ್ ನಡೆಯುವುದು ಒಂದು ಘಂಟೆಯ ಕಾಲವಾದರೆ ಅದು ಇರಬೇಕೇ? ಬೇಡವೇ? ಎಂಬ ಬಗ್ಗೆ ಒಂದೂವರೆ ಗಂಟೆ ಚರ್ಚೆ ನಡೆಯಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈ ಸದನದಲ್ಲಿ ಎಂದಾದರೂ ನಾನು ತಮ್ಮ ಮಾತಿಗೆ ಮನ್ನಣೆ ಕೊಡದೇ ಆ ರೀತಿಯಾಗಿ ನಾನು ವೈಯಕ್ತಿಕವಾಗಿ ನಡೆದುಕೊಂಡಂಥ ಒಂದು ಉದಾಹರಣೆಯನ್ನು ಕೊಡಿ, ನಾನು ತಾವು ಹೇಳಿದ ಹಾಗೆ ಕೇಳುತ್ತೇನೆ. ಆದರೆ ಈ ಸಂದರ್ಭದಲ್ಲಿ ಏನಾಯಿತು? ಮಾನ್ಯ ಮುಖ್ಯ ಮಂತ್ರಿಯವರು ಏನು ಹೇಳಿದರು ಅಂದರೆ ನೀವು ಅಲ್ಲಿಗೆ ಬನ್ನಿ, ಕೆಲವು ವಿಷಯಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ, ಅದಕ್ಕಾಗಿ ನಾನು ಅವರ ಚೇಂಬರ್‌ನಲ್ಲಿಯೇ ಈ ಮಾತುಗಳನ್ನು ಹೇಳುತ್ತೇನೆ, ಅಲ್ಲಿಯವರೆಗೆ ಬೇಕಾದರೆ 15 ನಿಮಿಷಗಳ ಕಾಲ ಆಡ್‌ಜರ್ನ್ ಮಾಡಿ ಎಂದು ಅವರು ಹೇಳಿದ್ದಾರೆ.

ಅಧ್ಯಕ್ಷರು:- ತಾವುಗಳು 1972ರಿಂದ ಈ ಸದನದಲ್ಲಿ ಸದಸ್ಯರಾಗಿದ್ದೀರಿ. ಎಷ್ಟು ಸಲ ಕ್ವೆಶ್ಚನ್

ಅವರ್ ಸಸ್ಪೆಂಡ್ ಮಾಡಿದ್ದಾರೆಂದು ಹೇಳಿ. ಪಾರ್ಲಿಮೆಂಟ್‌ನಲ್ಲಿ ಎಷ್ಟು ಸಲ ಕ್ವೆಶ್ಚನ್ ಅವರನ್ನು ಸಸ್ಪೆಂಡ್ ಮಾಡಿದ್ದಾರೆಂದು ಹೇಳಿ. ದಯಮಾಡಿ ತಮ್ಮ ಹತ್ತಿರ ಮಾಹಿತಿ ಇದ್ದರೆ ತಿಳಿಸಿ. ಅದು ನನಗೆ ಸಿಗುತ್ತಾ ಇಲ್ಲ. ಮಾನ್ಯ ಉತ್ತರಹಳ್ಳಿ ಶ್ರೀನಿವಾಸ್‌ರವರು ಹೇಳಲಿ. ಅವರು 1983ರಿಂದ ಇದ್ದಾರೆ. ಈಗ ಮೂರನೇ ಸಲ ಆಯ್ಕೆಯಾಗಿ ಬರುತ್ತಿದ್ದೀರಿ. ಎಷ್ಟು ಸಲ ಈ ಸದನದಲ್ಲಿ ಕ್ವೆಶ್ಚನ್ ಅವರ್‌ನ್ನು ಸಸ್ಪೆಂಡ್ ಮಾಡಿದ್ದಾರೆಂದು ಹೇಳಿ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಕಸಿವಿಸಿಯಾಗಿ ಯಾರು ನಡೆದುಕೊಂಡಿದ್ದಾರೆ? ಸದನದಲ್ಲಿ ವಿಚಾರವನ್ನು ಹೇಳುವುದಕ್ಕೆ ತಯಾರಾಗಿಲ್ಲ ಅದನ್ನು ಅವರೇ ಹೊರಗಡೇ ಹೇಳುತ್ತಾರೆ. ಪಕ್ಷದ ಮೀಟಿಂಗ್‌ನಲ್ಲಿ ಹೇಳುತ್ತಾದರೆ ಅಂದಮೇಲೆ ಈ ಸದನ ಏನು ಮಾಡಿದೆ? ಅವರೇ ಸದನವು ಎಲ್ಲರಿಗಿಂತ ಸಾರ್ವಭೌಮತ್ವವುಳ್ಳದ್ದು ಎಂಬ ಮಾತನ್ನು ಒಪ್ಪಿಕೊಂಡು ಪಕ್ಷದ ಮೀಟಿಂಗ್‌ನಲ್ಲಿ ಡಿಸ್‌ಕ್ಲೋಸ್ ಮಾಡಬಹುದು, ಪ್ರೆಸ್‌ನೋಟ್‌ನಲ್ಲಿ ಹೇಳಬಹುದು, ಸದನದಲ್ಲಿ ಅದೇ ಮಾತನ್ನು ಹೇಳಿ ಅಂದರೆ ನಾನು ಹೇಳುವುದಿಲ್ಲ, ಇದು ಸಿಕ್ರೇಟ್ ಇದೆ ಎಂದು ಹೇಳಿದರೆ?

ಅಧ್ಯಕ್ಷರು:- ನಾನು ನಿಮಗೆ ಏನು ಹೇಳುತ್ತಾ ಇದ್ದೇನೆ ಅಂದರೆ, if he has indulged in such an act and it amounts to privilege ಎಂದು ತಮಗೆ ಅನಿಸಿದರೆ you send a notice. I am not preventing you from doing it. That is your right. ಅದು ನಿಮ್ಮ ಹಕ್ಕಿ. ಅವರು ಈ ಸದನದ ಹಕ್ಕಿನ ಚ್ಯುತಿ ತಂದಿದ್ದಾರೆ, ಉಲ್ಲಂಘನೆ ಮಾಡಿದ್ದಾರೆ ಅಂದರೆ ನೀವು ದಯಮಾಡಿ ನೋಟೀಸ್ ಕೊಡಿ. I will examine it. ಕಾನೂನು ಪ್ರಕಾರ ನಡೆದುಕೊಳ್ಳುವುದಕ್ಕೆ ನಾನು ಸಿದ್ಧನಾಗಿದ್ದೇನೆ

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ನಾನು ತಮ್ಮ ತೀರ್ಪನ್ನು ಪ್ರಶ್ನೆ ಮಾಡಲು ಹೋಗುವುದಿಲ್ಲ. ಇವೊತ್ತು ಕಳುಹಿಸಿರತಕ್ಕಂಥ ಎಲ್ಲಾ ಪ್ರಶ್ನೆಗಳಿಗಿಂತ ಅತೀ ಮುಖ್ಯವಾದಂಥ ಪ್ರಶ್ನೆ ಇದೆ. ತಾವುಗಳು ಈ ಸದನ ಹೀಗೆ ನಡೆಯದೇ ಇರತಕ್ಕಂಥ ಇತಿಹಾಸ ಹಿಂದೆ ಇದೆಯೇ ಎಂದು ಕೂಡ ಕೇಳಿದ್ದೀರಿ. ಇದೇ ಸದನದಲ್ಲಿ 8 ದಿನಗಳ ಕಾಲ ಊಟ ತಿಂಡಿ ಮಾಡಿಕೊಂಡು ಧರಣಿ ಮಾಡಿರತಕ್ಕಂಥ ಇತಿಹಾಸವೂ ಉಂಟು. ಆಗ ಸದನವೇ ನಡೆಯಲಿಲ್ಲ.

ಅಧ್ಯಕ್ಷರು:- ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ನಾನು ಹೇಳುವುದೇನೆಂದರೆ, ಸದನವು ಪ್ರಾರಂಭವಾಗಿ ಯಾವುದೋ ಒಂದು ವಿಷಯದಲ್ಲಿ ಉದ್ವಿಗ್ನತೆ ಉಂಟಾಗಿ ಧರಣಿ ಮಾಡತಕ್ಕಂಥಾದ್ದೋ, 8- 10 ದಿವಸ ಇರತಕ್ಕಂಥಾದ್ದು ಸದನ ಪ್ರಾರಂಭವೇ ಆಗದೇ ಇರತಕ್ಕಂಥಾದ್ದು ಅದು ನನಗೂ ನೆನಪಿದೆ. 1978ನೇ ಇಸವಿಯಲ್ಲಿ ನಾವು ಬಂದಾಗಲೂ ಕೂಡ ಆ ತರಹ ಆಗಿದೆ. ಆದರೆ ಪ್ರಾರಂಭವಾದಾಗ ಪ್ರಶ್ನೋತ್ತರಗಳನ್ನು ಕೈಗೆತ್ತಿಕೊಳ್ಳದೆ, ಪ್ರಶ್ನೋತ್ತರವನ್ನು ಬದಿಗಿಟ್ಟು ಬೇರೆ ವಿಚಾರಗಳನ್ನು ಚರ್ಚೆಗೆ ತೆಗೆದುಕೊಂಡಂಥ ನಿದರ್ಶನಗಳು ತಮಗೆ ಏನಾದರೂ ನೆನಪಿದ್ದರೆ ಹೇಳಿ. ತಾವುಗಳು 1976ರಿಂದ ಈ ಸದನದಲ್ಲಿದ್ದೀರಿ. ವೈಕುಂಠಬಾಳಿಗಾರವರು ಸ್ಪೀಕರ್ ಆಗಿದ್ದಾಗಿನಿಂದಲೂ ತಾವುಗಳಿದ್ದೀರಿ. ದಯಮಾಡಿ ತಮಗೆ ನೆನಪಿದ್ದರೆ ನನಗೆ ಹೇಳಿ. ನಾನೂ ಕೂಡ ಹುಡುಕಿಸುತ್ತಾ ಇದ್ದೀನೆ. ಆದರೆ ಅವರೆಲ್ಲರೂ ಹೊಸಬರಿದ್ದಾರೆ, ಅವರಿಗೆ ಸಿಗುತ್ತಾ ಇಲ್ಲ. ತಮ್ಮ ನೆನಪಿನ ಶಕ್ತಿಯಿಂದ ನನಗೆ ಸಹಾಯ ಮಾಡುವುದಾದರೆ

ಹೇಳಿ. ನನಗೊಂದು ಆಸೆ ಇದೆ. ನಾನು ಒಂದು ಸಲ ವಿರೋಧ ಪಕ್ಷದ ಸದಸ್ಯನಾಗಿ ಬಂದು ನೀವು ಅಧ್ಯಕ್ಷರಾಗಿ ಇರಬೇಕು ಎಂದು ನನಗೆ ಆಸೆ ಇದೆ.

ಶ್ರೀ ವಾಟಾಳ್ ನಾಗರಾಜ್:- ನಾನೆಂದೂ ಇಲ್ಲಿ ಕುಳಿತುಕೊಳ್ಳುವುದಿಲ್ಲ ಸ್ವಾಮಿ. ವಿರೋಧ ಪಕ್ಷದ ಕಡೆ ನೀವು ಬರುವುದಾದರೆ ಸಂತೋಷ ಸ್ವಾಗತ ಮಾಡುತ್ತೇನೆ. ನೀವು ಬರುವುದಿಲ್ಲ ಎಂದು ಅಂದುಕೊಂಡಿದ್ದೇನೆ. ನೀವು ಅಲ್ಲೇ ಇರಿ, ನೀವಲ್ಲಿದ್ದರೆ ಚೆಂದ ನಮಗೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ಆ ನೋಟನ್ನು ತಮಗೆ ಕಳಿಸಿದ್ದೇನೆ. ಅವರ ಕಾರ್ಯದರ್ಶಿ ಕೂಡ ಏನು ಹೇಳಿದ್ದಾರೆಂಬುದು ಪಿ.ಟಿ.ಐ. ವಾರ್ತೆಯಲ್ಲಿ ಬಂದಿದೆ. ಅವರು ತಮ್ಮ ಪಕ್ಷದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಕ್ಕಾಗಿ ಪಕ್ಷದ ಸಭೆ ಕರೆದು ಅಲ್ಲಿ ಹೇಳಿದ್ದಾರೆ, ಯಾವ್ಯಾವ ಜಲಾಶಯದಿಂದ ಎಷ್ಟು ನೀರು ಬಿಡಬೇಕೆಂಬುದನ್ನೂ ಹೇಳಿದ್ದಾರೆ.

ಅಧ್ಯಕ್ಷರು:- ಈಗಲೂ ವಿನಂತಿ ಮಾಡಿಕೊಳ್ಳುತ್ತೇನೆ ನಿಮ್ಮಲ್ಲಿ, ವಿರೋಧ ಪಕ್ಷದ ನಾಯಕರಲ್ಲಿ ಎಲ್ಲರಲ್ಲೂ ಕೂಡ ವಿನಂತಿ ಮಾಡಿಕೊಳ್ಳುತ್ತೇನೆ. ಈಗಲೂ ನೀವು ಒಪ್ಪಿಕೊಳ್ಳುವುದಾದರೆ 10 ನಿಮಿಷ ನಾನು ಮುಂದಕ್ಕೆ ಹಾಕುತ್ತೇನೆ, ನೀವು ಅವರು 10 ನಿಮಿಷ ಕೂತುಕೊಳ್ಳಿ, ನೀವು ಪ್ರಿವಿಲೇಜಾದರೂ ಮೂವ್ ಮಾಡಿ ಅಥವಾ ನಿಮ್ಮ ನಿಲುವಳಿ ಸೂಚನೆ ಮೇಲೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಾದರೂ ನಾನು ಅವಕಾಶ ಕೊಡುತ್ತೇನೆ, ಯಾವ ರೂಪದಲ್ಲಿ ಚರ್ಚೆಗೆ ಬಂದರೂ ನಾನು ಆ ಚರ್ಚೆಗೆ ಅಡ್ಡ ಬರುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಚರ್ಚೆ ಮಾಡೋಣ, ಅದಕ್ಕೆ ನಾವು ನಿಂತಿರುವುದು. ಅದಕ್ಕಿಂತ ಮುಂಚೆ ಹರಿಯುವ ನೀರು ನಿಲ್ಲಿಸಿ ಎಂದು ಹೇಳಿ ಸಾರ್. ಹಾಗಂತ ನೀವು ಸ್ವಲ್ಪ ಹೇಳಿದರೆ ಅದು ಉಪಕಾರವಾಗುತ್ತದೆ.

ಅಧ್ಯಕ್ಷರು:- ನೀವೇ ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ತಮ್ಮ ಮೂಲಕವೇ ಅವರನ್ನು ಹೇಳುತ್ತಿರುವುದು, ಹೊರಗಡೆ ಹೇಳುವುದಕ್ಕಾಗುವುದಿಲ್ಲವಲ್ಲ.

ಶ್ರೀ ಜೆ.ಹೆಚ್.ಪಟೀಲ್:- ಪ್ರಿವಿಲೇಜ್ ಎಂದು ಹೇಳಿದಿರಿ. ನೀರನ್ನು ಇವತ್ತಿಷ್ಟು ಬಿಡುತ್ತೇವೆ, ನಾಳೆ ಇಷ್ಟು ಬಿಡುತ್ತೇವೆ ಎಂಬ ವಿಚಾರವನ್ನು ಅಲ್ಲಿ ಹೇಳುತ್ತೇನೆ ಎಂದು ಹೇಳಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹಾಗಲ್ಲ, ನೀವೇನು 5 ಟಿ.ಎಂ.ಸಿ. ಬಿಡುತ್ತೀರೋ 2 ಅಥವಾ 7 ಬಿಡುತ್ತೀರೋ, ಹಾರಂಗಿಯಿಂದ, ಕೆ.ಆರ್.ಎಸ್.ನಿಂದ ಮತ್ತು ಕಬಿನಿಯಿಂದ ಎಷ್ಟೆಷ್ಟು ಬಿಡಬೇಕೆಂಬ ಸವಿಸ್ತಾರ ಹೇಳಿಕೆಯನ್ನು ನಿಮ್ಮ ಕಾರ್ಯದರ್ಶಿ ಕೊಡಬಹುದು, ಆದರೆ ಸದನದ ಸದಸ್ಯರಿಗೆ ಈ ಮಾಹಿತಿ ಒದಗಿಸಿಕೊಡಲು ತಾವು ತಯಾರಿಲ್ಲ.

ಶ್ರೀ ಜೆ.ಹೆಚ್.ಪಟೀಲ್:- ನಾನು ಸದನಕ್ಕೇನಾದರೂ ಸ್ಟೇಟರಿಂಗ್ ಅಥವಾ ಪ್ರಾಮಖ್ಯತೆ ಕಡೆ, ಮಾಡಿ ಯಾವತ್ತು ಹಾಗೆ ಹೇಳಿಲ್ಲ. ಪತ್ರಿಕಾ ಹೇಳಿಕೆಗೂ, ಸದನದಲ್ಲಿ ಹೇಳುವ ಹೇಳಿಕೆಗೂ ಒಂದೆಯೇ?

SRI M.MALLIKARJUN KHARGE:- That is your Party Statement. That is the announcement of Ypur Sec-

retary after the JDLP Meeting.

ಶ್ರೀ ವಾಟಾಳ್ ನಾಗರಾಜ್:- ಇವತ್ತು ಬೆಳಿಗ್ಗೆ ಜನತಾ ದಳ ಶಾಸಕಾಂಗ ಪಕ್ಷದಲ್ಲಿ ನೀರನ್ನು ಬಿಡುತ್ತೇವೆಂದು ಸ್ಪಷ್ಟಪಡಿಸಿದ್ದಾರೆ, 15 ಟಿಎಂಸಿ ಬದಲು 5 ಟಿಮಿಸಿ ಬಿಡುತ್ತಿದ್ದೇವೆಂದು. ನನಗೆ ಬಂದಿರತಕ್ಕ ವರದಿ ಪ್ರಕಾರ ನಿನ್ನೆ ರಾತ್ರಿಯಿಂದಲೇ ನೀರು ಬಿಡುತ್ತಿದ್ದೀರಿ. ಆ ನೀರು ನಿಲ್ಲಿಸಿ ಎಂದು ನಮ್ಮಲ್ಲಿ ಕೆಲವರು ಕೇಳುತ್ತಿದ್ದಾರೆ, ನಿನ್ನೆ ರಾತ್ರಿಯಿಂದಲೇ ನೀರು ಹೋಗುತ್ತಿರುವುದನ್ನು ಇನ್ನೆಲ್ಲಿ ನಿಲ್ಲಿಸುವುದು? ಈಗ ತಮಗೆ ಸೂಕ್ಷ್ಮವಾಗಿ ಒಂದೇ ಪ್ರಶ್ನೆ. ನೀರು ಬಿಟ್ಟಿದ್ದೇವೆ. ಅಥವಾ ಇಲ್ಲ ಎಂದು ಅದೇನು ಸಮಗ್ರವಾಗಿ ಚರ್ಚೆ ಮಾಡುವ ಪ್ರಶ್ನೆಯಲ್ಲ. ಈಗ ಮನವಿ ಸಲ್ಲಿಸುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಮನವಿ ಸಲ್ಲಿಸಿದ್ದೇವೆ. ನಮ್ಮ ಮನವಿಗೆ ಉತ್ತರವಾಗಿ ಒಂದು ನಿಮಿಷದಲ್ಲಿ ಅವರು ಅವರ ಪಕ್ಷದಲ್ಲಿ ಹೇಳಿರುವುದನ್ನೆ ಹೇಳುತ್ತಾರೋ ಅಥವಾ ಬೇರೆ ಹೇಳುತ್ತಾರೋ ಏನಾದರೂ ಒಂದು ಮುತು ಹೇಳಿದರೆ ಮುಂದೆ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಆಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವೊಬ್ಬ ಹಿರಿಯ ಮುತ್ಸದ್ದಿ, ಅನುಭವವಿರುವವರು ಆ ಸ್ಥಾನದಲ್ಲಿ ಕುಳಿತ ಮೇಲೆ ಕಳೆದೆರಡು ಮೂರು ದಿವಸಗಳಿಂದ ನೋಡಿದರೆ ಏಕೆ ಹೀಗೆ ಮಾಡುತ್ತಿದ್ದೀರಿ? ನಾವು ಎಲ್ಲಾ ರೀತಿ ಸಹಕಾರ ಕೊಡಲು ರೆಡಿಯಿದ್ದರೂ ಸಹ ಯಾರಾದರೂ ಮಾಟ ಮಾಡಿಸಿದ್ದಾರೋ, ಮಂತ್ರ ಮಾಡಿಸಿದ್ದಾರೋ ಏಕೆ ಹೀಗೆ ನಡೆದುಕೊಳ್ಳುತ್ತಿದ್ದೀರಿ? ಬಹಳ ಗಂಭೀರವಾಗಿ ಈ ಮುತು ಹೇಳುತ್ತಿದ್ದೇನೆ. ಆ ಸ್ಥಾನದಲ್ಲಿ ಕುಳಿತು ತಾವೇ ಹೇಳಿ ಇಲ್ಲ ಯಡಿಯೂರಪ್ಪನವರೇ ಪ್ರಿವಿಲೇಜಾಗುವುದಿಲ್ಲ ಎಂದು ಆಗ ನಾವು ಎತ್ತುವುದಿಲ್ಲ. ನಿಮ್ಮ ಜನತಾದಳ ಶಾಸಕಾಂಗ ಪಕ್ಷದ ಸಭೆಯಲ್ಲಿ 5 ಟಿಎಂಸಿ ನೀರು ಬಿಡಬೇಕೆಂದು ತೀರ್ಮಾನವಾಗುತ್ತದೆ. ನಿನ್ನೆ ವಿರೋಧಿ ಪಕ್ಷದ ಸದಸ್ಯರುಗಳ ಸಭೆ ಕರೆದಿದ್ದೀರಿ, ನಾವೆಲ್ಲ ನಿಮ್ಮ ಜೊತೆ ಮಾತನಾಡುವುದಕ್ಕೆ ಸಿದ್ದವಾಗಿದ್ದೆವು. ಅಲ್ಲೇ ಬೆಳಿಗ್ಗೆ 8 ಗಂಟೆಗೆ ವಿರೋಧಪಕ್ಷದವರೆಲ್ಲ ಬನ್ನಿ ವಿಶೇಷವಾದ ಸಂದರ್ಭ ಇದೆ ಮಾತನಾಡೋಣ ಎಂದು ಹೇಳಬಹುದಾಗಿತ್ತು. ಆರೀತಿ ಮಾಡಲಿಲ್ಲ. ಈಗ 5 ಟಿಎಂಸಿ ನೀರು ಬಿಟ್ಟಿದ್ದೇವೆಂದು ಪತ್ರಿಕಾ ಹೇಳಿಕೆ ಕೊಡುತ್ತೀರಿ, ಅದು ಸೀಕ್ರೆಟಲ್ಲವೆ? ನಿಮ್ಮ ಸಿಎಲ್‌ಪಿ ಮೀಟಿಂಗ್‌ನಲ್ಲಿ ಆಗಿದ್ದನ್ನು ಸೀಕ್ರೆಟಗಗಿ ಇಡಬಹುದಾಗಿತ್ತು, ಆದರೆ ಪತ್ರಿಕೆಗಳಿಗೆ ಹೋದಿರಲ್ಲ, ರಾಜ್ಯದ ಜನರಿಗೆ ನಾವೇನು ಹೇಳೋಣ. ನಾವೇನು ಹೇಳುವುದು ಎಂದರೆ ಯಾವುದೋ ಒಂದು ಇಕ್ಕಟ್ಟಿಗೆ ಸಿಕ್ಕಿಕೊಂಡು ಒದ್ದಾಡುತ್ತಿದ್ದೀರಿ ಮುಖ್ಯಮಂತ್ರಿಗಳೇ, ನಾವು ನಿಮಗೆ ಏನು ಕೇಳಿದೆವು? ಸೀಕ್ರೆಟಾದರೆ ಖಂಡಿತ ನಾವು ಒತ್ತಾಯ ಮಾಡುದಿಲ್ಲ. ರಾಜ್ಯದ ಹಿತಕ್ಕೆ ಧಕ್ಕೆ ಆಗುವಂಥಾದ್ದುನ್ನು ನಾವು ಕೇಳುವುದಿಲ್ಲ. ಪತ್ರಿಕಾ ಹೇಳಿಕೆ ಕೊಟ್ಟಿರುವುದನ್ನು ಹೇಳಿ ಇಷ್ಟು ನೀರು ಬಿಟ್ಟಿದ್ದೇವೆ ಎಂದು ಹೇಳಿ, ನಮಗೆ ಗೊತ್ತಿರುವ ಪ್ರಕಾರ ಕಬಿನಿಯಿಂದ ರಾತ್ರಿಯೇ ಒಂದೂವರೆ ಟಿಎಂಸಿ ನೀರು ಹೋಗಿದೆ. ಬನ್ನಿ ನಾವು ತೋರಿಸುತ್ತೇವೆ. ಆಗಲಾದರೂ ತಾವು ಒಪ್ಪಿಕೊಳ್ಳುತ್ತೀರಾ? ಸದನವನ್ನು ಅಜರ್ನ್ ಮಾಡಿ, ಜೊತೆಯಲ್ಲಿ ಹೋಗೋಣ. ಅಲ್ಲಿ ಒಂದೂವರೆ ಇಲ್ಲಿ ಮೂರುವರೆ ಎಂದರೆ ಈಗಾಗಲೇ ಅದು ನಮ್ಮ ಪ್ರಕಾರ ಏಳಾಗುತ್ತೋ ಎಂಟಾಗುತ್ತೋ ಹತ್ತಾಗುತ್ತೋ, ಆಂಥ ಅನಿವಾರ್ಯ ಏನು ಬಂದಿತ್ತು? ಸುದೀರ್ಘವಾಗಿ ಚರ್ಚೆ ಮಾಡೋಣ. ರಾಜ್ಯದ ಹಿತಕ್ಕೆ ಧಕ್ಕೆ ಬರದಂತೆ ಮಾತನಾಡುವುದು ನಮಗೆ ಗೊತ್ತಾಗುವುದಿಲ್ಲವೇ? ಇವತ್ತು ಎಂದೂ ಇಲ್ಲದಂತೆ ಪಾಪ ಅಧ್ಯಕ್ಷರೂ ಬೇಸರ ಮಾಡಿಕೊಂಡರು, ನಾವೆಲ್ಲ ರೀತಿ ಸಹಕಾರ

ಕೊಡುವುದಕ್ಕೂ ಸಿದ್ಧರಿದ್ದೆವು.

ಅಧ್ಯಕ್ಷರು:- ವಿರೋಧ ಪಕ್ಷದ ನಾಯಕರ ನಿಮ್ಮ ಚರ್ಚೆ ನೀವು ಎತ್ತಿದ ವಿಚಾರಗಳು ಆ ಯಾವ ವಿಚಾರದಲ್ಲೂ ನನಗೆ ಬೇಸರವಿಲ್ಲ. ನಿಗದಿತ ರೀತಿಯಲ್ಲಿ ಕಲಾಪ ನಡೆಸುವುದಕ್ಕೆ ಆಗಲಿಲ್ಲವಲ್ಲ ಎಂಬ ವ್ಯಥೆ ಅಷ್ಟೇ ನನಗೆ. ನಾವು ಪ್ರಶ್ನೋತ್ತರ ಎಂದು ಹೇಳುತ್ತೇವೆ, ಸದಸ್ಯರೆಲ್ಲ ಮೊದಲೇ ಪ್ರಶ್ನೆಗಳನ್ನು ಕಳಿಸುತ್ತಾರೆ. ಪ್ರಶ್ನೆಗಳಿಗೆ ಉತ್ತರ ತರಿಸುವುದಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತೇವೆ. ಪ್ರಶ್ನೋತ್ತರ ಇಲ್ಲಿ ಅಮುಖ್ಯವಾಗಿಬಿಡುತ್ತದೆ, ಸದಸ್ಯರು ಎಷ್ಟೋ ಕಾತರರಾಗಿ ಬಂದಿರುತ್ತಾರೆ, ಅವರು ಯಾವುದೇ ಕಡೆ ಸದಸ್ಯರಾಗಿರಬಹುದು. ಆ ವಿಚಾರಕ್ಕೆ ನನ್ನ ಮನಸಿಗೆ ನೋವಾಗಿದೆ ಅಷ್ಟೇ ಮತ್ತಿನ್ನೇನೂ ಇಲ್ಲ.

ಶ್ರೀ ಬಿ.ಎನ್.ಯಡಿಯೂರಪ್ಪ:- ಇಲ್ಲಿ ದುಃಖವಾಗುವಂಥಾದ್ದು ಅಂದರೆ 1-7-96ಕ್ಕೆ ಅಂತ್ಯವಾದ ವಾರದ ಮಳೆ ವಿವರ ಎಂದು ಒಂದು ಮಾಹಿತಿ ಕೊಡುತ್ತಾರೆ ಸ್ವಾಮಿ, ನೀವು ನೀರು ಬಿಡುತ್ತಿರೋ ಅಥವಾ ಜನಗಳ ಮೇಲೆ ಕಲ್ಲು ಹಾಕುತ್ತಿರೋ ಅದರ ತೀರ್ಮಾನ ಮಾಡಿದರೆ ಗೋಡಗ ಹೈ ಮೈದಾನ ಹೈ ಜನ ಇದ್ದಾರೆ ನೋಡಿಕೊಳ್ಳಲಿ, ಆದರೆ ಇಲ್ಲಿ ನೋಡಿ ಏನು ಪರಿಸ್ಥಿತಿ ಇದೆ? ನಿಮ್ಮ ಅಧಿಕಾರಿಗಳು ವರದಿ ಕೊಡುತ್ತಾರೆ 1-7-96ರಲ್ಲಿ ಏನಿತ್ತು ಎಂದು ರಾಜ್ಯದ 175 ತಾಲ್ಲೂಕುಗಳ ಪೈಕಿ 155 ತಾಲ್ಲೂಕುಗಳಿಂದ ವರದಿ ಬಂದಿತ್ತು, ಈ ಪೈಕಿ 27 ತಾಲ್ಲೂಕುಗಳಲ್ಲಿ ಅತ್ಯಲ್ಪ ಮಳೆಯಾಗಿದೆ 126 ತಾಲ್ಲೂಕುಗಳಲ್ಲಿ ಮಳೆಯೇ ಆಗಿರುವುದಿಲ್ಲ. ಕೇವಲ 2 ತಾಲ್ಲೂಕುಗಳಲ್ಲಿ ಮಾತ್ರ ಮಾಮೂಲು ಅಥವಾ ಅಧಿಕ ಮಳೆಯಾಗಿರುತ್ತದೆ. ಆದರೆ ಮೈಸೂರು ವಿಭಾಗದಲ್ಲಿ ಒಂದು ತಾಲ್ಲೂಕಿನಲ್ಲಿ ಮಾಮೂಲು 13 ತಾಲ್ಲೂಕುಗಳಲ್ಲಿ ಅತ್ಯಲ್ಪ ಮಳೆ ಆಗಿದ್ದರೆ 22 ತಾಲ್ಲೂಕುಗಳಲ್ಲಿ ಮಳೆಯೇ ಆಗಿರುವುದಿಲ್ಲ. ಕಳೆದ ಸಾಲಿನ ಇದೇ ಅವಧಿಯಲ್ಲಿ 14 ತಾಲ್ಲೂಕುಗಳಲ್ಲಿ ಅಧಿಕ ಮತ್ತು 18 ತಾಲ್ಲೂಕುಗಳಲ್ಲಿ ಮಾಮೂಲು ಮಳೆಯಾಗಿತ್ತು. ಇದು ನಿಮ್ಮ ವರದಿ ಸ್ವಾಮಿ. ನಾನೂ ಜವಾಬ್ದಾರಿ ಸ್ಥಾನದಲ್ಲಿದ್ದೇನೆ, ಇಲ್ಲಿ ಸರ್ಕಾರ ನಡೆಸಿದವರು ಇದ್ದಾರೆ ಹಿಂದೆ ಅನೇಕ ಸಂದರ್ಭಗಳಲ್ಲಿ ನೀರು ಬಿಟ್ಟಿದ್ದಾರೆ. ಅದಲ್ಲಾ ಪ್ರಶ್ನೆ, ಸಂದರ್ಭ ಏನು ಸ್ವಾಮಿ ಇವುತ್ತು? ನಿಮ್ಮ ವರದಿ ಪ್ರಕಾರ 7.7.96ಕ್ಕೆ ನಮಗೆ ಆವಶ್ಯಕತೆ ಇದ್ದುದು 24.348 ಎಂಡಿಡಿಎಲ್, ಇವತ್ತು ಕರ್ನಾಟಕದಲ್ಲಿ ಲಭ್ಯವಿರುವ ಪ್ರಮಾಣ ಕೆಆರ್ಎಸ್, ಕಬಿನಿ, ಹೇಮಾವತಿ ಹಾರಂಗಿ 23.218. ಟಿಎಂಸಿ 7.7.96ಕ್ಕೆ ನಿಮ್ಮ ಹತ್ತಿರ ಇರುವುದೇ 1.130 ಟಿಎಂಸಿ. ಇದು ನಿಮ್ಮ ಸರ್ಕಾರ ಕೊಟ್ಟಿರುವ ಅಂಕಿಅಂಶ.

ಶ್ರೀ ಜೆ.ಹೆಚ್.ಪಟೇಲ್:- ಅದು ಸರಿಯಿಲ್ಲ.

ಶ್ರೀಬಿ. ಎಸ್.ಯಡಿಯೂರಪ್ಪ:- ಇದು ನಿನ್ನೆ ಮೀಟಿಂಗಿನಲ್ಲಿ ಕೊಟ್ಟಿರುವುದು, ಹಾಗಾದರೆ ನಾನು ಕೇಳುತ್ತೇನೆ, ಇದು ಸರಿಯಿಲ್ಲವೆಂದರೆ ಈ ಸರ್ಕಾರ ರಾಜೀನಾಮೆ ಕೊಟ್ಟು ಹೋಗಬೇಕಾಗುತ್ತದೆ.

ಶ್ರೀ ಜೆ.ಹೆಚ್ .ಪಟೇಲ್:- ನೀವು ಕೇಳಿದ ಕೂಡಲೇ ರಾಜೀನಾಮೆ ಕೊಡುವುದಕ್ಕಲ್ಲ ಇಲ್ಲಿ ನಾವು ಕುಳಿತಿರುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸಾರ್ ನಿಧಾನಕ್ಕೆ ಕೊಡುವಿರಂತೆ, ನೀವು ಕೊಡಬಾರದು ಅಂತಿದ್ದರೆ ನಾವೇನು ಮಾಡೋಣ. ನಿಮ್ಮ ನೀರಾವರಿ ಸಚಿವರು ಅಲ್ಲಿದ್ದಾಗ ಇಲ್ಲಿದ್ದಾಗ, ಮಂಡ್ಯ ಜಿಲ್ಲೆಯವರು ಹೌದೋ ಅಲ್ಲವೋ ಆ ಕಡೆ ಹೇಮಾವತಿ, ಕೆಆರ್ಎಸ್ ಕಡೆ ಹಿತ ಇದೆಯೋ ಇಲ್ಲವೋ

ಆದೇನೋ ನೀವೂ ಒಂದು ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡು 4 ಗಂಟೆ ಮೇಲೆ ಏನೇನೋ ಗೊಂದಲ ಮಾಡಿಕೊಂಡು ನೀರು ಬಿಟ್ಟು ರಾಜ್ಯದ ಜನರ ಹಿತ ಕಡೆಗಾಣಿಸಿ ನೀರು ಬಿಟ್ಟಿದ್ದಾರೋ ಇಲ್ಲವೋ ಹೇಳದೆ, ಕಾಣುವುದಿಲ್ಲವೇ ನಿಮ್ಮ ಒಗ್ಗಟ್ಟ, ಎಡ ಬಲ ಹಿಂದೆ ಮುಂದೆ, ನಿಮ್ಮ ಶಾಸಕರಲ್ಲಿ ಏನೋ ಗೊಂದಲ, ಬಡಿದಾಟ ಅದನೆಲ್ಲಾ ಈ ರಾಜ್ಯದ ಜನರ ತಲೆಮೇಲೆ ಹೇರಿ ಈ ಪರಿಸ್ಥಿತಿಗೆ ನಾವೇನು ತಂದಿದ್ದೇವೆ. ಇದು ಖಂಡಿತ ಶೋಭೆ ತರುವ ಸಂಗತಿಯಲ್ಲ. ಕೊನೆಯದಾಗಿ ಒಂದೇ ಮಾತು, ನೀವು 5 ಟಿಎಂಸಿ ನೀರು ಬಿಟ್ಟಿದ್ದಿರೋ ಇಲ್ಲವೋ ಎಂದು ಹೇಳಿ, ನಮ್ಮ ಪ್ರಕಾರ ನಿನ್ನೆ ರಾತ್ರಿಯಿಂದಲೇಒಂದೂವರೆ ಟಿಎಂಸಿ ನೀರನ್ನು ಹೇಮಾವತಿಯಿಂದ ಬಿಡಿಸಿದ್ದೀರಿ. ಬೇಕಾದರೆ ನಾವು 4 ಜನ ಹೋಗಿ ನೋಡಿಕೊಂಡು ಬರೋಣ.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ವಿರೋಧಪಕ್ಷದ ನಾಯಕರು 5 ನಿಮಿಷ ಯೀಲ್ಡ್ ಆಗಬೇಕು ಸರಿಯಾದ ಪೊಸಿಷನ್ ಏನು ಎಂಬುದನ್ನು ನಾನು ಸಭೆಗೆ ಕೊಡುತ್ತೇನೆ. Then you can start the sicussion. It is better. ಸುಮ್ಮನೆ ಕನ್‌ಫ್ಯೂಸ್ ಮಾಡಿಕೊಳ್ಳುವುದು ಬೇಡ. ಮಾನ್ಯ ಅಧ್ಯಕ್ಷರೆ, ತಾವು ಅನುಮತಿ ಕೊಟ್ಟರೆ ಕೆಲವಾರು ವಿಚಾರಗಳನ್ನು ಸದನಕ್ಕೆ ತಿಳಿಸಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ ಬೆಳಿಗ್ಗೆ ಅವರು ಪೂರ್ವಭಾವಿ ಚರ್ಚೆ ಪ್ರಾರಂಭ ಮಾಡಿದಾಗ ಕೆಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದರು. ಆಗ ನಾನು ಪ್ರಾರಂಭದಲ್ಲೇ ಹೇಳಿದೆ. ಎಷ್ಟು ನೀರು ಇದೆ ನೀರು ಬಿಟ್ಟಿದ್ದೇವೋ ಇಲ್ಲವೋ ಎನ್ನುವುದು ಒಂದನೇ ವಿಚಾರ. ಯಾವ ಸಂದರ್ಭದಲ್ಲಿ ಬಿಟ್ಟಿರಿ ಏತಕ್ಕೋಸ್ಕರ ಬಿಟ್ಟಿರಿ ಎನ್ನುವುದು ಎರಡನೆ ವಿಚಾರ ಮೂರನೇ ವಿಚಾರ, ನೀವು ರಾಜಕೀಯವಾಗಿ ಪ್ರಧಾನ ಮಂತ್ರಿಗಳ, ಮುಖ್ಯ ಮಂತ್ರಿ ಸ್ಥಾನಗಳನ್ನು ಉಳಿಸಿಕೊಳ್ಳುವುದಕ್ಕೋಸ್ಕರವಾಗಿ ನೀರು ಬಿಟ್ಟಿದ್ದೀರಿ ಎನ್ನುವ ಮಾತುಗಳನ್ನು ಎಲ್ಲಾರೂ ಬಳಸಿದ್ದಾರೆ. ನಾನು ಮೊದಲೇ ಈ ರಿಸರ್ವಾಯಾರ್ ಪೊಸಿಷನ್ ಅನ್ನು ಹೇಳಬೇಕಾಗುತ್ತದೆ. ನೀವು ಕರ್ನಾಟಕ ರಾಜ್ಯದಿಂದ ಮಾಹಿತಿ ಬೇಕು ಎಂದು ಕೇಳಿದಿರಿ, ನೀರು ಬಿಟ್ಟಿದ್ದೆವೋ ಇಲ್ಲವೋ ಎಂದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಚರ್ಚೆ ಆ ಮೇಲೆ ಮಾಡೋಣ.

ಶ್ರೀ ಕೆ.ಎನ್.ನಾಗೇಗೌಡ:- ಮಾಹಿತಿ ಬೇಕು ಎಂದು ನೀವು ಕೇಳಿದಿರಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನೀರು ಬಿಟ್ಟರೇ ಇಲ್ಲವೇ ಎಂದು ನಾವು ಕೇಳಿದ್ದುದು. . . .

(ಗೊಂದಲ)

ಶ್ರೀ ಕೆ.ಎನ್.ನಾಗೇಗೌಡ:- ಇವರು ಹೇಳಿದ ಹಾಗೆ ಕೇಳುವುದಕ್ಕಾಗುವುದಿಲ್ಲ. ಇದು ಪ್ರಶ್ನೆ ಉತ್ತರ ಅಲ್ಲ. You cannot restrict my statement.

(ಗೊಂದಲ)

ಶ್ರೀ ಕೆ.ಎನ್.ನಾಗೇಗೌಡ:- ನೀರು ನಿಲ್ಲಿಸಿ ಎಂದು ಹೇಳುವುದಕ್ಕೆ ಅವರಿಗೆ ರೈಟ್ಸ್ ಇರಬಹುದು ನಿಲ್ಲಿಸಬೇಕೋ ಎಂಬುದು ಸರಕಾರಕ್ಕೆ ಬಿಟ್ಟ ವಿಚಾರ ಅದು. ಆದರೆ ಅವರು ಪೊಸಿಷನ್ ಕೇಳಿದರು, ಬಿಟ್ಟಿದ್ದೀರೋ ಇಲ್ಲವೋ ಎಂದು ಕೇಳಿದರು . . . .

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಹಾಗಾದರೆ ನೀರು ನಿಲ್ಲಿಸಿ ಎಂದು ನಾವು ಧರಣಿ ಮಾಡೋಣ ಬನ್ನಿ.

ಮಾನ್ಯ ವಾಟಾಳ್ ನಾಗರಾಜ್ ರವರು ಸದನದ ವೆಲ್‌ನಲ್ಲಿ ಬಂದು ಕುಳಿತರು)

ಶ್ರೀ ಕೆ.ಎನ್.ನಾಗೇಗೌಡ:- ಅದು ನಿಮಗೆ ಬಿಟ್ಟಿದ್ದುದು. ಚರ್ಚೆ ಮಾಡುವ ಬದಲು ರಾಜಕೀಯ ಮಾಡಬೇಕು ಎಂದರೆ ರಾಜಕೀಯ ಮಾಡಿ. ನಮ್ಮ ಅಭ್ಯಂತರ ಇಲ್ಲ. ರಾಜ್ಯದ ಉದ್ದಗಲಕ್ಕೂ ರಾಜಕೀಯವೆಂದು ನಾವು ಹೇಳುತ್ತೇವೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- 3500 ಕ್ಯೂಸೆಕ್ಸ್ ಅಂದರೆ 24 ಗಂಟೆ ಬಿಟ್ಟರೂ ಒಂದು ಟಿಎಂಸಿ ಹೋಗಬೇಕಾದರೆ ಕಷ್ಟ.

(ಗೊಂದಲ)

ಶ್ರೀ ಸಿ.ಬೈರೇಗೌಡ:- ಅವರು ಹೇಳಿಕೆ ಮಾಡಬೇಕೆಂದು ಹೇಳಿದರು. ಮಾನ್ಯ ಮಂತ್ರಿಗಳು ಹೇಳಿಕೆ ಕೊಡುವುದಕ್ಕೆ ತಯಾರಿದ್ದಾರೆ. ಅವರು ಹೇಳಿಕೆ ಮಾಡುವುದಕ್ಕೆ, ಸರಕಾರದಲ್ಲಿ ಏನು ಮಾಹಿತಿ ಇದೆ ಎನ್ನುವುದನ್ನು ಸದನದ ಗಮನಕ್ಕೆ ತರುವುದಕ್ಕೂ ಅವಕಾಶ ಇಲ್ಲ. ಮಾಹಿತಿ ಬೇಕೆಂದು ಕೇಳುತ್ತಾರೆ, ಮಾಹಿತಿ ಕೊಡುವುದಕ್ಕೆ ಮಂತ್ರಿಗಳು ತಯಾರಿದ್ದಾರೆ. ತಾವು ದಯವಿಟ್ಟು ಅದನ್ನು ಕೇಳಿ ಆ ಮೇಲೆ ನೀವು ಏನು ಮಾತನಾಡಬೇಕೋ ಮಾತನಾಡಿ.

(ಗೊಂದಲ)

ಶ್ರೀ ಕೆ.ಎನ್ನಾಗೇಗೌಡ:- ಮಂತ್ರಿಗಳನ್ನು ಇದೇ ರೀತಿ ಹೇಳಿಕೆ ಮಾಡಬೇಕು, ಹೀಗೆ ಕ್ರಮ ತೆಗೆದುಕೊಳ್ಳಬೇಕು ಹೀಗೆ ಕೆಲಸ ಮಾಡಬೇಕೆಂದು ಹೇಳುವುದು ಸರಿಯಲ್ಲ. ಅವರೂ ಮಂತ್ರಿಗಳಾಗಿ ಕೆಲಸ ಮಾಡಿದಂತಹವರು ಈ ರೀತಿ ಮಾತನಾಡುತ್ತಾರೆಂದು ನಾನು ತಿಳಿದುಕೊಂಡಿರಲಿಲ್ಲ. ಅವರು ಮಾಹಿತಿ ಕೇಳಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀರು ಬಿಡುವುದು ನಮ್ಮ ಹಕ್ಕು. ನೀವೇನೂ ಕೇಳುವ ಹಾಗಲ್ಲ. ನೀವು ಬಿಡಬೇಕೋ ಬೇಡವೋ ಇದು ನಮಗೆ ಬಿಟ್ಟಿದ್ದುದು ನಾವು ಬಿಟ್ಟಿದ್ದೇವೆ. ಏನು ಮಾಡುತ್ತಿರೋ ಮಾಡಿಕೊಳ್ಳಿ ಎನ್ನುವ ಧಾಟಿಯಲ್ಲಿ ಅವರು ಹೇಳಿದರು. ಆದರೆ ರಾಜ್ಯದ ಹಿತದೃಷ್ಟಿಯಿಂದ ನೀವು ನಮ್ಮನ್ನು ಏಕೆ ಕರೆಸಿದಿರಿ. ನಮ್ಮನ್ನು ಕರೆದು ಸಭೆ ನಡೆಸುವುದು. ರಾತ್ರೋರಾತ್ರಿ ನಿರ್ಣಯಗಳನ್ನು ತೆಗೆದುಕೊಳ್ಳುವುದು, ಇದಕ್ಕೆ ಎಲ್ಲಾ ಪಾರ್ಟಿಗಳವರು ಬದ್ಧರಿದ್ದಾರೆಂದು ಹೇಳುವುದು, ಇನ್ನೊಂದು ಕಡೆ ಎಲ್ಲಾ ಪಕ್ಷದವರು ಕೂಡಿ ನಮಗೆ ಒಗ್ಗಟ್ಟಾಗಿ ಹೇಳಿದ್ದಾರೆಂದು ಹೇಳುವುದು, ಮತ್ತೊಂದು ಕಡೆ ನೀರು ಬಿಡುವುದು ಸರಿಯಲ್ಲ. ನಾನು ಕಳಕಳಿಯಿಂದ ತಮ್ಮ ಮುಖಾಂತರ ಇನ್ನೊಮ್ಮೆ ಅವರನ್ನು ಕೇಳುತ್ತೇನೆ. ಈಗ ನಾವು ತಕ್ಷಣ ನೀರು ನಿಲ್ಲಿಸಿ. ಇನ್ನೂ ಒಂದು ಟಿಎಂಸಿ ನೀರು ಕೂಡ ಹೋಗಿಲ್ಲ. ಅವರು ನೀರು ನಿಲ್ಲಿಸಲಿ ನಂತರ ಮಾತುಕತೆಯಾಡೋಣ. ಆದಾದ ಮೇಲೆ ಅದು ಸರಿ ಇದೆ ಎಂದು ಇಡೀ ಸದನದ ಸದಸ್ಯರಿಗೆ ಮನವರಿಕೆಯಾದರೆ ನೀವೇನು ಹೇಳುತ್ತೀರೋ ಅದನ್ನೇ

ಕೇಳೋಣ. ಆದರೆ ಬೇಕಾದಾಗ ಕರೆಯಿಸಿ ಮಾತನಾಡುತ್ತೀರಿ ಆಲ್ ಪಾರ್ಟಿ ಸಭೆ ನಡೆಸುತ್ತೀರಿ, ನಿಮಗೆ ಬೇಡವಾದಾಗ ಅಥವಾ ಅನಾನುಕೂಲವಿದ್ದಾಗ ಅದನ್ನು ಬಿಟ್ಟು ನೀವು ನೀವೇ ನಿರ್ಣಯ ತೆಗೆದುಕೊಳ್ಳುವುದು. ನೀವು ನಮ್ಮನ್ನು ಕೇಳುವುದಕ್ಕಿಂತ ಮುಂಚೆ ಸದನದ ಗಮನಕ್ಕೆ ತರುವುದಕ್ಕೆ ಮುಂಚೆ, ವಿರೋಧ ಪಕ್ಷದವರನ್ನು ಕೇಳುವುದಕ್ಕಿಂತ ಮುಂಚೆ ನೀವೇ ಮೀಟಿಂಗ್ ಮಾಡಿಕೊಂಡು, ನೀವೇ ಪ್ರೆಸ್ ನೋಟ್ ಕೊಟ್ಟುಕೊಂಡು ಹೇಳಿಕೊಳ್ಳುವುದು. ಈ ರೀತಿಯಾಗಿ ತಾವು ನಡವಳಿಕೆ ನಡೆದರೆ ಅದು ಎಷ್ಟರಮಟ್ಟಿಗೆ ಸರಿ ಇದೆ ಎಂದು ತಾವೆಲ್ಲ ಹೇಳಬೇಕು. ಅದಕ್ಕಾಗಿ ನಾವು ಕೇಳಿದ್ದುದು. ತಕ್ಷಣ ನಿಲ್ಲಿಸಿರಿ, ನೀರು ನಿಲ್ಲಿಸಿ ಬೇಕಾದರೆ ಮಾತುಕತೆ ಆಡೋಣ. ನೀವೇನು ಹೇಳುತ್ತೀರಿ ಅದರ ಬಗ್ಗೆ ಎಲ್ಲಾರೂ ಕೂಡಿ ಸವಿಸ್ತಾರವಾಗಿ ಚರ್ಚೆ ಮಾಡೋಣ. ಅವರು ನಿಲ್ಲಿಸುವುದಿಲ್ಲವೆಂದರೆ ಅನಿವಾರ್ಯವಾಗಿ ನಾವೂ ಧರಣಿ ಕೂಡಬೇಕಾಗುತ್ತದೆ.

ಶ್ರೀ ಎಂ. ನಾರಾಯಣಸ್ವಾಮಿ:- ಅವರು ಯಾವಾಗಲೂ ರಾಜಕೀಯವನ್ನೇ ಮಾಡುತ್ತಾರೆ. ಪ್ರತಿ ಸಾರಿ ಕೂಡ ಬರೀ ರಾಜಕೀಯವೇ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ:- ರಾಜಕೀಯವೇ ನೀವು ಮಾಡುತ್ತಿರುವುದು. ಹೋದ ಸಾರಿ ಮಾಡಿದ್ದು ರಾಜಕೀಯ. ಪಾರ್ಲಿಮೆಂಟ್ ಚುನಾವಣೆಯಲ್ಲಿ ಎಷ್ಟು ಎಂದು ಗೊತ್ತಾಯಿತು. ಪ್ರತಿ ಸಾರಿ ಕಾವೇರಿ ವಿಚಾರದಲ್ಲಿ ರಾಜಕೀಯ ಮಾಡಿದಿರಿ, ಮಂಡ್ಯದಲ್ಲಿ ಧರಣಿ ಮಾಡಿದಿರಿ. ಜನ ಪಾರ್ಲಿಮೆಂಟ್ ಚುನಾವಣೆಯಲ್ಲಿ ತೀರ್ಪು ಕೊಟ್ಟರು. ಮತ್ತೆ ರಾಜಕೀಯ . . .

(ಗೊಂದಲ)

ಶ್ರೀ ಎಂ. ನಾರಾಯಣಸ್ವಾ ಮಿ:- ಹೋದ ಸಾರಿ ಪಾರ್ಲಿಮೆಂಟ್‌ನಲ್ಲಿ, ಅಸೆಂಬ್ಲಿಯಲ್ಲಿ ಜನ ತೀರ್ಪು ಕೊಟ್ಟಿದ್ದಾರೆ. ಪ್ರತಿ ಸಾರಿ ಕಾವೇರಿ ಮೇಲೆ ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆ ಅವರು.

(ವಿರೋಧ ಪಕ್ಷದ ಎಲ್ಲಾ ಸದಸ್ಯರು ವೆಲ್‌ನಲ್ಲಿ ಬಂದು ನಿಂತರು)

ಶ್ರೀ ಕೆ.ಎನ್.ನಾಗೇಗೌಡ:- ನಾವು ಬೆಳಿಗ್ಗೆ 8-30 ಗಂಟೆಯಲ್ಲಿ . . . .

ಶ್ರೀ ಬಿ.ಎಸ್.ಯಡಿಯೂರಪ್ಪ:- ಈ ಸರಕಾರದ ನೀತಿ ಮನೆಗೆ ಮಾರಿ ಪರರಿಗೆ ಉಪಕಾರಿ ಎನ್ನುವ ರೀತಿಯಾಗಿದೆ. ಬಹಳ ಗಂಭೀರವಾಗಿ ಈ ಸದನದ ಕಾರ್ಯಕಲಾಪ ನಡೆಯಬೇಕೆಂಬ ಇಚ್ಛೆಯನ್ನು ನಾವು ಹೊಂದಿದ್ದೆವು. ಕಳೆದ 3-4 ತಿಂಗಳಿನಿಂದ ಅಧಿವೇಶನ ನಡೆದಿಲ್ಲ, ಜನರ ಅನೇಕ ಸಮಸ್ಯೆಗಳು ಇವೆ ನೀವೇ ಕೊಟ್ಟಿರುವ ವರದಿ ಪ್ರಕಾರ ಬರಗಾಲದ ವಾತಾವರಣ ಇದೆ ರಾಜ್ಯದ ಹಿತವನ್ನು ಬಲಿ ಕೊಟ್ಟು ಈ ಸಮಯದಲ್ಲಿ ತಮಿಳುನಾಡಿಗೆ ನೀರು ಬಿಡುವುದು ನಿಮ್ಮ ಕುರ್ಚಿ ದೆಹಲಿಯಲ್ಲಿರುವ ಕುರ್ಚಿ ಉಳಿಸಿಕೊಳ್ಳುವುದಕ್ಕೆ ನಿಮ್ಮ ಸಂಬಂಧ ಉಳಿಸಿಕೊಳ್ಳುವುದಕ್ಕೆ ನೀವು ಈ ಕೆಲಸ ಮಾಡುತ್ತಿದ್ದೀರಿ ಎನ್ನುವುದನ್ನು ನಾವು ಮೊದಲಿನಿಂದ ಹೇಳಿಕೊಂಡು ಬಂದೆವು. ನೀವು ಚರ್ಚೆ ಮಾಡಿದ್ದರೆ ನಿಮ್ಮ ಜೊತೆಯಲ್ಲಿ ನಾವು ಮಾತನಾಡುವುದಕ್ಕೆ ಸಿದ್ಧ ಇದ್ದೆವು. ಯಾವ ವಿಶೇಷವಾದ ಸಂದರ್ಭದಲ್ಲಿ ನೀರು ಬಿಡುವಂತಹ ಪರಿಸ್ಥಿತಿ ಬಂತು ಎನ್ನುವುದನ್ನು ನಮಗೆ ಕನ್‌ವಿನ್ಸ್ ಮಾಡಿದ್ದರೆ ಭಾರತೀಯ ಜನತಾ ಪಾರ್ಟಿಯ ನಿಲುವನ್ನು ನಾನಂತೂ ಸ್ಪಷ್ಟ ಮಾಡುತ್ತೇನೆ. ಈ ಒಂದು ಕಾವೇರಿಯಿಂದ ಪಕ್ಕದ ರಾಜ್ಯಗಳಿಗೆ

ನೀರನ್ನು ಬಿಡಬೇಡಿ ಎಂದು ಹೇಳುವಂತಹ ಪಾರ್ಟಿ ನಮ್ಮದಲ್ಲ. ಬಹುಶಃ ಯಾರೂ ಅದನ್ನು ಹೇಳುವುದಿಲ್ಲ. ನಮ್ಮ ಜಲಾಶಯದಲ್ಲಿ ನೀರಿಲ್ಲದೇ ಇದ್ದಾಗ ನಾಳೆ ಮಳೆ ಬರುವಂತಹ ಯಾವುದೇ ಸಂದರ್ಭ ಇಲ್ಲದೇ ಇರುವಂತಹ ಕಾಲದಲ್ಲಿ, ಅವರು ಸುಪ್ರೀಂ ಕೋರ್ಟಿಗೆ ಹೋಗುತ್ತೇವೆಂದು ಹೆದರಿಸುತ್ತಾರೆ. ಪ್ರಧಾನಿಯವರನ್ನು ನಾಳೆ ಕುರ್ಚಿಯಿಂದ ಇಳಿಸುತ್ತಾರೆನ್ನುವ ಭಯಕ್ಕೋಸ್ಕರ ಒತ್ತಡಕ್ಕೆ ಮಣಿದು ಈ ರಾಜ್ಯದ ಹಿತವನ್ನು ಬಲಿ ಕೊಟ್ಟಿದ್ದೀರಿ, ಇದನ್ನು ಪ್ರತಿಭಟಿಸಿ ನಾವು ಧರಣಿ ಮಾಡುತ್ತಿದ್ದೇವೆ. ಬಹುಶಃ ರಾಜ್ಯದ ಜನರ ಹಿತಕ್ಕಿಂತ ಪ್ರಮುಖವಾದ ಬೇರೆ ಕೆಲಸ ನಮಗೇನೂ ಉಳಿದಿಲ್ಲ. ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಬಹುಶಃ ಇನ್ನು ಮುಂದೆ ಈ ಸರಕಾರದ ಬಗ್ಗೆ ಅನುಮಾನ ಬರುತ್ತದೆ. ಈಗಾಗಲೇ ನಿನ್ನೆ ರಾತ್ರಿಯಿಂದ ಒಂದೂವರೆ ಟಿಎಂಸಿ ನೀರು ಬಿಟ್ಟಿದ್ದೀರಿ, 5 ಎಂದು ಜನರ ಮುಂದೆ ಹೇಳುತ್ತೀರಿ, 10 ಟಿಎಂಸಿ ಬಿಡುವುದಕ್ಕೆ ಸಿದ್ಧತೆ ನೀವು ಮಾಡಿಕೊಂಡಿದ್ದೀರಿ. ನಾನು ಬಹಳ ಸ್ಪಷ್ಟವಾಗಿ ಜವಾಬ್ದಾರಿಯಿಂದ ಸರಕಾರಕ್ಕೆ ಆರೋಪ ಮಾಡುತ್ತಿದ್ದೇನೆ. ರಾಜ್ಯದ ಜನ ಮಾತನಾಡುತ್ತಿದ್ದಾರೆ. ಕೇಂದ್ರ ಸರಕಾರವನ್ನು ಉಳಿಸುವುದಕ್ಕೆ ಸನ್ಮಾನ್ಯ ಜೆ.ಹೆಚ್.ಪಟೇಲ್‌ರಂತಹ ಒಬ್ಬ ಮುತ್ಸದಿಕಾ ಇಲ್ಲಿ ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿ ಈ ರಾಜ್ಯದ ಹಿತವನ್ನು ಬಲಿ ಕೊಟ್ಟರು ಎಂದು ಹೇಳುವಂತಹ ಕರಾಳ ದಿನ ಇವತ್ತು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಮನಬಂದಂತೆ ಒಂದು ರೀತಿ ತೊಘಲಕ್ ದರ್ಬಾರ್ ನಡೆಯುತ್ತಿದೆ. ಇದನ್ನು ಪ್ರತಿಭಟಿಸಿ ಜನ ಹಿತಕ್ಕೆ ಮಾರಕವಾಗಿರುವ ನೀತಿಗೆ ಪ್ರತಿಭಟಿಸಿ ಅನಿವಾರ್ಯವಾಗಿ ನಾವು ಧರಣಿ ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಎಲ್.ಆರ್.ಶಿವರಾಮೇಗೌಡ:- ಈಗ ಏನು ಇಲ್ಲಿ ಧರಣಿ ಮಾಡುವುದಕ್ಕೆ ಹೊರಟಿದ್ದಾರೆ, ಅದು ಸದನದಲ್ಲಿನಡೆಯತಕ್ಕಂತಹ ವಿಚಾರ ಅಲ್ಲ. ಹಿಂದೆ ಇದೇ ಸರಕಾರ ಕೇಂದ್ರದಲ್ಲಿದ್ದಾಗ 5 ಟಿಎಂಸಿ ಬೇಡಿ, 12 ಟಿಎಂಸಿ ನೀರು ಬಿಡಿ ಎಂದು ಹೇಳಿದಾಗ ನಮ್ಮ ಕಾಂಗ್ರೆಸ್ ಮಿತ್ರರೆಲ್ಲಾ ಬಿಡಲೇಬೇಕೆಂದು ಒಳಗೆ ಹೊರಗೆ ಎಲ್ಲಾ ಚರ್ಚೆ ನಡೆದಿರುವುದನ್ನು ನಾವು ಕೇಳಿದ್ದೇವೆ. ಇವತ್ತು ನೀರು ಬಿಡುವುದಕ್ಕಿಂತ ಮುಂಚೆಯೇ ಚರ್ಚೆ ಮಾಡಲಿಕ್ಕೆ ಅವಕಾಶಕೊಡುತ್ತೇವೆಂದು ಹೇಳಿದರೂ ಇವರು ಕೇಳುವುದಕ್ಕೆ ಸಿದ್ಧರಿಲ್ಲ. ನೀವೂ ಸ್ವಲ್ಪ ಯೋಚನೆ ಮಾಡಬೇಕು. ಸಭಾನಾಯಕರು ಒಳಗೆ ಕರೆದು ಚರ್ಚೆ ಮಾಡುತ್ತೇವೆಂದರೆ ಅದಕ್ಕೂ ಹೋಗುವುದಿಲ್ಲವೆಂದು ಹೇಳುತ್ತೀರಿ. ಈಗ ಸದ್ಯಕ್ಕೆ ಯಾವುದೂ ಚುನಾವಣೆ ಇಲ್ಲ. ಆದ್ದರಿಂದ ಆತುರಾತುರವಾಗಿ ಈ ಕೆಲಸ ಮಾಡಬೇಡಿ. ಚರ್ಚೆಗೆ ಅವಕಾಶ ಕೊಡಿ. ಚುನಾವಣೆ ಮುಗಿಸಿ ಈಗ ಬಂದಾಗಿದೆ. ಚರ್ಚೆಗೆ ಅವಕಾಶಕೊಡಿ.

(ಗೊಂದಲ)

ಶ್ರೀ ಕೆ.ಎನ್.ನಾಗೇಗೌಡ:- ತಾವು ಅನುಮತಿ ಕೊಟ್ಟರೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ಬೆಳಿಗ್ಗೆ 9-00 ಗಂಟೆಗೆ ನಾವು ಕಬಿನಿಯಿಂದ 13500 ಕ್ಯೂಸೆಕ್ಸ್ ನೀರನ್ನು ತಮಿಳುನಾಡಿಗೆ ಬಿಡುತ್ತಿದ್ದೇವೆ. 5 ಟಿಎಂಸಿ ನೀರನ್ನು ತಮಿಳುನಾಡಿಗೆ ಕೊಡಬೇಕೆಂದು ರಾಜ್ಯ ಸರ್ಕಾರ ತೀರ್ಮಾನ ಮಾಡಿದೆ.

ಇನ್‌ಫ್ಲೋ....

(ಷೇಮ್ ಷೇಮ್ ಎಂದು ವೆಲ್‌ನಲ್ಲಿದ್ದವರು ಕೂಗಿದರು)

(ಗೊಂದಲ)

ಶ್ರೀ ಕೆ.ಎಸ್.ನಾಗೇಗೌಡ:- ಕಬಿನಿಗೆ ಈಗ 2200 ಕ್ಯೂಸೆಕ್ಸ್ ನೀರು ಇನ್‌ಫ್ಲೋ ಆಗುತ್ತಿದೆ. ನಮ್ಮಲ್ಲಿ ಒಟ್ಟು 30 ಟಿಎಂಸಿ ನೀರು ಇದೆ. ಕರ್ನಾಟಕ ರಾಜ್ಯದ ರೈತರಿಗೆ ಯಾವುದೇ ರೀತಿ ಧಕ್ಕೆಯಾಗುವಂತಿಲ್ಲ. ಅವರ ರಕ್ಷಣೆ ಮಾಡುವುದಕ್ಕೆ ಎಲ್ಲಾ ರೀತಿಯಲ್ಲೂ ವ್ಯವಸ್ಥೆ ಇದೆ.

(ಗೊಂದಲ)

★ ಅಧ್ಯಕ್ಷರ ಆಧಾರದ ಮೇರೆಗೆ ಹೇಳಿಕೆಯನ್ನು ಸರಿಪಡಿಸಲಾಗಿದೆ.

★ ಶ್ರೀ ಜೆ.ಹೆಚ್.ಪಟೀಲ್ (ಮುಖ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಈ ವಿಷಯದ ಗಂಭೀರತೆ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಉಳಿದ ಪಕ್ಷಗಳ ನಾಯಕರುಗಳು ನೀರು ಬಿಟ್ಟಿದ್ದೀರೋ ಇಲ್ಲವೋ ನಾನು ಹೇಳಿದೆ, ಈ ವಿಷಯವನ್ನು ಸದನದಲ್ಲೇ ಮುಚ್ಚಿಟ್ಟುಕೊಂಡು ಬೇರೆ ಕಡೆ ಏತಕ್ಕೆ ಹೇಳಿದರು ಎಂದು, ನಿನ್ನೆ ನೀರಿಲ್ಲ ಎಂದು ಹೇಳಿದಿರಿ ಎಂದು. ಅವರು ನಿನ್ನೆ ಬೆಳಿಗ್ಗೆ ತಮಿಳುನಾಡಿನವರು ಸುಪ್ರೀಂ ಕೋರ್ಟಿಗೆ ಅರ್ಜಿ ಹಾಕುವವರು ಇದ್ದರು. ನನ್ನ ಹತ್ತಿರ ಸಾಕಷ್ಟು ನೀರು ಇದೆ ಎಂದು ಹೇಳುತ್ತಾರೋ?.. any man with littel wisdon? ಅದಕ್ಕೆ ನಾನು ಕೆಲವು ವಿಷಯಗಳನ್ನು ಸದನದಲ್ಲಿ ಹೇಳಿದರೆ ಅದು ಸಾರ್ವಜನಿಕ ಸ್ವತ್ತಾಗುತ್ತದೆ. It goes on record. ಬೇಡ, ಇಲ್ಲಿ ಹೇಳುವುದು ಬೇಡ ಎಂದು ಇದ್ದೆ. ಇವರಿಗೆ ಬಹಳ ಬಡವರು ಗೊತ್ತಿರುವುದು, ಇವರಿಗೇ ಬಹಳ ರೈತರು ಗೊತ್ತಿರುವುದು. ನಾವೆಲ್ಲಾ ಪರದೇಶಿಗಳು. ನಾನು ಇಷ್ಟು ಸಾರಿ ಕೇಳಿಕೊಂಡಿದ್ದೇನೆ. ರೈತರಿಗೆ ಧಕ್ಕೆ ಮಾಡಿ ನಾಮ್ಮ ರೈತರ ಫಸಲನ್ನು ಒಣಗಿಸಿಕೊಂಡು ನಾವು ಬೇರೆಯವರಿಗೆ ನೀರು ಕೊಡುತ್ತೇವೆಯೇ? ಸಾಧ್ಯವಿಲ್ಲ. ಈ ರೀತಿ ದಿವಸವೂ ಸದನದಲ್ಲಿ ಮಾಡಿದರತ ಜನರು ನಮ್ಮನ್ನು ಹೇಗೆ ಕ್ಷಮಿಸುತ್ತಾರೋ ನನಗಂತೂ ಗೊತ್ತಿಲ್ಲ. ಒಂದೊಂದು ನಿಮಿಷಕ್ಕೆ ಆಗಿನ ಕಾಲದಲ್ಲಿ ಇಪ್ಪತ್ತುಸಾವಿರ ರೂಪಾಯಿ ಖರ್ಚಾಗುತ್ತಿತ್ತು. ಇವರು ಮೂರು ಮೂರು ದಿವಸ ಹೀಗೆ ಧರಣಿ ಕೂಡುತ್ತಾರೆ. ಇವರಿಗೆ ಬಹಳ ದೊಡ್ಡ ಜವಾಬ್ದಾರಿ. ಜನರ ಸಂಕಷ್ಟಗಳು ಇವರಿಗೆ ಗೊತ್ತು. ಚರ್ಚೆ ಮಾಡಲಿ; ಹೇಳಲಿ. ತಪ್ಪಾಗಿದ್ದರೆ ನಾವು ತಿದ್ದಿಕೊಳ್ಳುತ್ತೇವೆ. ಹಿಂದೆ ನಾನು ಹೇಳಿದ್ದೇನೆ, ಸರ್ಕಾರ ನಡೆಸುವುದು ಎಂದಕೂಡಲೇ ನಾವು ಹೇಳಿದ್ದೆಲ್ಲ ನೀವು ಕೇಳಬೇಕು ಎಂದು ಹೇಳಿಲ್ಲ. ಆದರೆ ಜನರ ಹಿತದೃಷ್ಟಿಯಿಂದ ನೀವು ಹೇಳುವುದು ಸರಿ ಇದ್ದರೆ ಒಪ್ಪಿಕೊಳ್ಳುತ್ತೇವೆ ಎಂದು ನಾನು ತೋರಿಸಿದ್ದೇನೆ. ದಿವಸವೂ ಇದೇ ಒಂದು ಕಸುಬಾಗಿಬಿಟ್ಟಿತು ಮಾನ್ಯ ಅಧ್ಯಕ್ಷರೇ. ಮನಸ್ಸಿಗೆ ಬಹಳ ನೋವಾಗುತ್ತದೆ. ಅದರೊಳಗೂ ಎಲ್ಲಾ ಅನುಭವಿಗಳು, ಎಲ್ಲಾ ಲೋಕಸಭಾ ನೋಡಿದವರೂ ಇದ್ದಾರೆ. ಇಲ್ಲಿ ನೋಡಿದವರೂ ಇದ್ದಾರೆ. ಕೌನ್ಸಿಲ್ ನೋಡಿದವರೂ ಇದ್ದಾರೆ. ಕರ್ನಾಟಕದ ಜನ ಏನು ತಿಳಿದುಕೊಂಡಾರು? ನಮ್ಮನ್ನು ಏತಕ್ಕೆ ಕಳುಹಿಸಿದ್ದಾರೆ? ಈ ರೀತಿ ಧರಣಿ ಕೂಡುವುದಕ್ಕಾ?

ಒಬ್ಬ ಮಾನ್ಯ ಸದಸ್ಯರು:- ನೀರು ಬಿಡುವುದಕ್ಕೆ.

ಶ್ರೀ ಜೆ.ಹೆಚ್.ಪಟೀಲ್:- ನೀರು ಇದ್ದರೆ ಬಿಡುತ್ತೇವೆ. ನಮ್ಮ ರೈತರಿಗೆ ತೊಂದರೆಯಾಗದಂತೆ ನೀರು ಇದ್ದರೆ ಬಿಡುತ್ತೇವೆ. ನಾವು ತಮಿಳುನಾಡಿನವರು ಏನು ಪಾಕಿಸ್ತಾನ, ಹಿಂದೂಸ್ತಾನ ಅಲ್ಲ. ನಾವು ಆಂಧ್ರದವರು ಹೊಂದಿಕೊಳ್ಳಬೇಕಾಗುತ್ತದೆ. ನಿನ್ನೆಯೆಲ್ಲಾ ಹೇಳಿದರು ಇವರು, ನಾನು ಇವರ ಉಪದೇಶವನ್ನು ಕೇಳುತ್ತಿದ್ದೆ. ನಾವು ಒಳ್ಳೆಯ ವಾತಾವರಣವನ್ನು

ಮಾತುಕತೆಯಿಂದಲೇ ಬಗೆಹರಿಸಿಕೊಳ್ಳಬೇಕು, ನಾವು ಕೋರ್ಟಿಗೆ ಹೋಗಬಾರದು, ಟ್ರಿಬ್ಯೂನಲ್‌ಗೆ ಹೋಗಬಾರದು ಎಂದು ಎಲ್ಲಾ ಹೇಳಿದರು. ಮಾತುಕತೆಗಳಿಂದಲೇ ಬಗೆಹರಿಸಬೇಕು. ಅವನು ನಾನು ಸಾಯುತ್ತೇನೆ ಅಪ್ಪಾ ಒಂದು ಲೋಟ ನೀರುಕೊಡು ಎಂದರೆ ಕೊಡುವುದಿಲ್ಲ ಎಂದು ಹೇಳಬೇಕೇ? ಅದಕ್ಕೆ ಅವರಿಗೆ ಜವಾಬ್ದಾರಿ ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಈ ವಿಷಯದ ಬಗ್ಗೆ ತೀರಾ ಎಳೆಯುವುದಾದರೆ ಸರ್ಕಾರ ತಗ್ಗುವುದಿಲ್ಲ. ಸರ್ಕಾರ ಇದಕ್ಕೆ ಸರಿಯಾದ ಉತ್ತರವನ್ನು ಕೊಡಬೇಕಾಗುತ್ತದೆ. ಆದಕ್ಕೆ ನಾನು ಮತ್ತೊಮ್ಮೆ ತಮಗೆ ಮನವಿ ಮಾಡಿಕೊಳ್ಳುತ್ತೇನೆ.' ಅವರು ಈ ಧರಣದ ನಾಟಕವನ್ನು ಬಿಡಲಿ. ಇದು ಸರಿಯಲ್ಲ.

(ಧಿಕ್ಕಾರ, ಧಿಕ್ಕಾರ ಎಂದು ವಿರೋಧ ಪಕ್ಷದ ಸದಸ್ಯರೆಲ್ಲರೂ ಒಟ್ಟಿಗೆ ಬಾವಿಯಲ್ಲಿ ನಿಂತು ಕೂಗುತ್ತಿದ್ದರು.)

ಈಗ ನನ್ನ ಕುರಿತು, ಪ್ರಧಾನಮಂತ್ರಿಗಳನ್ನು ಕುರಿತು ನೀವು ಹೇಳಿದ್ದನ್ನೆಲ್ಲಾ ಕೇಳಿದರೆ ಅದಕ್ಕೆ ಬೇರೆ ಉತ್ತರ ಕೊಡೋಣ. ಆದರೆ ಇದರಲ್ಲಿ ಪ್ರಧಾನಮಂತ್ರಿಗಳ ಕುರ್ಚಿಯ ಪ್ರಶ್ನೆ ಇಲ್ಲ. ನನ್ನ ಕುರ್ಚಿ ಪ್ರಶ್ನೆ ಇಲ್ಲ. ಇವತ್ತು ಕರ್ನಾಟಕ ರೈತರ ಮತ್ತು ನಮ್ಮ ಪಕ್ಕದ ರಾಜ್ಯಗಳ ಸಂಬಂಧ ನೆರೆಹೊರೆಯ ಸಂಬಂಧ ಈ ದೃಷ್ಟಿಯಿಂದ ಸಲಹೆ ಕೊಡುತ್ತಾರೆ ಎಂದರೆ ಇದು ಕ್ವಾಸ್ ಎಕ್ಸಾಮಿನ್ ಮಾಡಿದ ಹಾಗೆ. ಕೇಳಿದ ಪ್ರಶ್ನೆಗೆ ಉತ್ತರ ಹೇಳು, ಹೀಗಾ ಮಾಡುವುದು ಎನ್ನುವುದು. ಸರ್ಕಾರ ಹೇಗೆ ನಡೆಸುವುದು ಎಂದು ಅವರಿಗೂ ಗೊತ್ತಿದೆ. ಪಾಪ, ಯಡಿಯೂರಪ್ಪನವರಿಗೆ ಗೊತ್ತಿರಲಿಕ್ಕಿಲ್ಲ. ಆದ್ದರಿಂದ ಸರ್ಕಾರ ನಡೆಸಿದವರಾದರೂ ಏನು ಎಂಥ ವಿಷಯವನ್ನು ಎಲ್ಲಿ ಹೇಳಬಹುದು, ಎಲ್ಲಿ ಹೇಳುವುದಕ್ಕಾಗುವುದಿಲ್ಲ ಎಂದು ಅವರಿಗೆ ಗೊತ್ತಿಲ್ಲವೇ? ಇದು ಬಹಳ ಶೋಚನೀಯವಾದ ಸ್ಥಿತಿ. ಮಾನ್ಯ ಅಧ್ಯಕ್ಷರೇ, ದಯವಿಟ್ಟು ತಾವು ಯಾವ ತರಹ ನಿರ್ದೇಶನ ಕೊಡುತ್ತೀರೋ ಸರ್ಕಾರ ಆ ರೀತಿ ನಡೆದುಕೊಳ್ಳುವುದಕ್ಕೆ ತಯಾರು ಇದ್ದೇವೆ ನಾವು. ಈಗ ಸದನದ ಮುಂದೆ ಇರತಕ್ಕಂಥ ಕಾರ್ಯಕಲಾಪಗಳನ್ನು ತಾವು ನಡೆಸಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಮಾತು ಕೇಳಿ ನನಗಂತೂ ಆಶ್ಚರ್ಯವಾಯಿತು. ಏನೋ ಸೀನಿಯರ್ ಇದ್ದಾರೆ ಎಂದು ಹೇಳಿ ನಾವು ಕೂಡ ಸಾಕಷ್ಟು ಅವರಿಗೆ ಮರ್ಯಾದೆ ಕೊಡುತ್ತೇವೆ ಮತ್ತು ಕೇವಲ ಈ ಸದನದ ಒಬ್ಬರು ಮುಖಂಡರು ಎಂದು ಅಷ್ಟೇ ಅಲ್ಲ, ಹೊರಗೂ ಕೂಡ ಅವರು ಮುಖ್ಯಮಂತ್ರಿಗಳಿಲ್ಲದಿದ್ದರೂ ಕೂಡ ಅವರಿಗೆ ಅಷ್ಟೇ ಗೌರವಕೊಡತಕ್ಕಂಥ ಜನರಲ್ಲಿ ನಾವು ಕೂಡ ಒಬ್ಬರು ಇದ್ದೇವೆ. ಆದರೆ ಇವರು ಧರಣ ನಾಟಕೀಯವಾಗಿ ಮಾಡುತ್ತಾರೆ, ಆಮೇಲೆ ಇದು ನಾಟಕ, ಇವರಿಗೇನು ಆಸಕ್ತಿ ಇಲ್ಲ, ಇವರಿಗೇ ಏನು ಬಡವರ ಬಗ್ಗೆ ಕಾಳಜಿ ಇರುವುದು, ನಮಗಿಲ್ಲವೇ ಎಂದೆಲ್ಲ ಹೇಳಿದರು. ನಿಮಗಿಲ್ಲ ಎಂದು ನಾವು ಎಂದೂ ಹೇಳಿಲ್ಲ. ಆದರೆ ಪ್ರಜಾಪ್ರಭುತ್ವದಲ್ಲಿ ನಾವು ಹೇಳಿದ ಮಾತನ್ನು ತಾವು ಕೇಳದೇ ಇದ್ದಾಗ ನಾವು ಚರ್ಚೆ ಮಾಡಬಹುದು, ತಮಗೆ ಕೇಳಬಹುದು, ಇಲ್ಲವೇ ತಾವು ನಿನ್ನೆ ಮೀಟಿಂಗ್‌ಗೆ ಕರೆದಿದ್ದಿರಿ, ಅಲ್ಲಿ ಹೇಳಬಹುದು ಅಥವಾ ತಮಗೆ ಬೇಕಾಗಿದ್ದ ಈ ವಿಷಯವನ್ನು ಅಲ್ಲಿ ಪ್ರಸ್ತಾಪ ಮಾಡಬಹುದಾಗಿತ್ತು. ಆದರೆ ತಾವು ಇವೆಲ್ಲಾ ಬಿಟ್ಟು ತರಾತುರಿಯಲ್ಲಿ ನೀವೇ ನಿರ್ಣಯ ತೆಗೆದುಕೊಂಡು, ನೀವೇ ಅನೌನ್ಸ್ ಮಾಡಿಕೊಂಡು ನಾವು ನೀರು ಬಿಟ್ಟಿದ್ದೇವೆ ಎಂದು ಹೇಳಿ

ಪತ್ರಿಕೆಯಲ್ಲಿ ಹೇಳಬಹುದು. ಈ ಸದನಕ್ಕೆ ಹೇಳಿಲ್ಲ, ಅಂದಾಗ ಅದನ್ನು ಕೇಳತಕ್ಕಂಥ ಹಕ್ಕು ನಮಗೆ ಇದೆ. ನೀರು ನಿಲ್ಲಿಸಿ ಎಂದು ಹೇಳತಕ್ಕಂಥ ಅಧಿಕಾರವೂ ನಮಗಿದೆ. ನೀವು ಕೇಳುತ್ತೀರೋ ಬಿಡುತ್ತೀರೋ ಆ ಮಾತು ಬೇರೆ. ಆದರೆ ನೀವು ಕೇಳಲೇಬಾರದು, ಏಕೆ ಕೇಳುತ್ತೀರಿ ಎಂದರೆ ನಮಗೆ ಹೊಡೆಯುವುದಕ್ಕಾಗುತ್ತದಾ? ಧರಣಿಯನ್ನೇ ಮಾಡಬೇಕು. ಇಲ್ಲಾ ಒಬ್ಬರಿಗೊಬ್ಬರು ಶರ್ಟ್ ಹಿಡಿದುಕೊಂಡು ಗುದ್ದಾಡುವುದಕ್ಕಾಗುತ್ತದೆಯೇ? ಪ್ರಜಾಪ್ರಭುತ್ವದಲ್ಲಿ ಧರಣಿ ಮಾಡತಕ್ಕಂಥದ್ದು, ಪ್ರೊಟೆಸ್ಟ್ ಮಾಡತಕ್ಕಂಥದ್ದು, ಅಜಿಟೇಟ್ ಮಾಡತಕ್ಕಂಥದ್ದು, ಸ್ಲೋಗನ್ ಹಾಕತಕ್ಕಂಥದ್ದು ಇದೇ ಪ್ರಜಾಪ್ರಭುತ್ವದ ಹಾದಿ. ತಲೆ ಹಿಡಿದುಕೊಂಡು ಒಬ್ಬರಿಗೆ ಒಬ್ಬರು ಕುತ್ತಿಗೆಗೆ ಕೈ ಹಾಕುವುದಕ್ಕಾಗುತ್ತದೆಯೇ! ಪಿಸ್ತೂಲ್ ತೆಗೆದುಕೊಂಡು ಹೊಡೆಯುವುದಕ್ಕಾಗುತ್ತದೆಯೆ? ಆದರೆ ಅದನ್ನು ಬಿಟ್ಟು ಇವರು ನಾಟಕ ಮಾಡುತ್ತಾರೆ, ಧರಣಿ ಮಾಡುತ್ತಾರೆ ಎಂದರೆ ಮತ್ತೇನು ಮಾಡಬೇಕು? ಏನು ಜಗಳ ಆಡಬೇಕೇ? ಕುಸ್ತಿ ಆಡಬೇಕೇ? ಅವರು ಕೂಡ ಸ್ವಲ್ಪ ತಮ್ಮ ಇತಿಮಿತಿಯಲ್ಲಿ ಮಾತನಾಡಿದರೆ ಒಳ್ಳೆಯದಾಗುತ್ತದೆ. ಅವರ ಗೌರವಕ್ಕೆ ತಕ್ಕಂತೆ, ವಯಸ್ಸಿಗೆ ತಕ್ಕಂತೆ ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಪುನ: ಪುನ: ಅದನ್ನೇ ಹೇಳಿ ಛೇಡಿಸಬಾರದು ಎಂದು ತಮ್ಮ ಮುಖಾಂತರ ಅವರಿಗೆ ಕೇಳಿಕೊಳ್ಳುತ್ತೇನೆ.

MR. SPEAKER:- I want everything ಇದೊಂದೂ ಕೂಡ ಜನರಿಗೆ ಗೊತ್ತಾಗಬೇಕು. ದಯಮಾಡಿ ಸಹಕರಿಸಿ. Everything should go to people ಸಭೆಯನ್ನು ಮುಂದೂಡುತ್ತಿದ್ದೇನೆ. ಪುನ: 3 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸಭೆಯು 1-35ಕ್ಕೆ ಮುಕ್ತಾಯಗೊಂಡು ಮತ್ತೆ 3-00 ಗಂಟೆಗೆ ಮತ್ತೆ ಸಮಾವೇಶಗೊಳ್ಳುವುದು.)

(ಸದನವು ಪುನ: ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು, ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

(ವಿರೋಧ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಯಲ್ಲಿ ಧರಣಿ ಕುಳಿತ್ತಿದ್ದರು)

ಅಧ್ಯಕ್ಷರು:- ನೋಡಿ ವಸಂತ ಬಂಗೇರರವರೆ, ನಿಮ್ಮ ಆಡಳಿತ ಪಕ್ಷದವರನ್ನು ಸದನಕ್ಕೆ ಕರೆತನ್ನಿ.

ಶ್ರೀ ಡಿ.ನಾಗರಾಜಯ್ಯ:- ಸದನವನ್ನು ನಡೆಸುವುದಕ್ಕೆ ವಿರೋಧಪಕ್ಷದವರು ಅವಕಾಶ ಕೊಡದೆ ಹೀಗೆ ಮಾಡುತ್ತೀರಿ ಎಂದೇ ತಡವಾಗಿ ಬರುತ್ತಾ ಇರುವುದು.

(ವಿರೋಧ ಪಕ್ಷದ ನಾಯಕರುಗಳಾದ, ಶ್ರೀ ಬಿ.ಎಸ್.ಯಡಿಯೂರಪ್ಪ, ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ ಹಾಗೂ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ತೆರಳಿ ತಮ್ಮ ಸ್ಥಾನದಲ್ಲಿ ಕುಳಿತುಕೊಂಡರು)

ಶ್ರೀ ಬಿ.ಎಸ್.ಯಡಿಯೂರಪ್ಪ:- ದಯಮಾಡಿ, ಈಗ, ಈ ವಿಷಯಕ್ಕೆ ಬಹಿಷ್ಕಾರ ಹಾಕಿ, ಇದು ಸರಿಯಲ್ಲವೆಂದು ನಾವು ಧರಣಿ ಕುಳಿತಿದ್ದೇವೆ. ಇದು ಸರಿ ಎಂದು ಬಹಿಷ್ಕಾರ ಹಾಕಿ ಆಡಳಿತ ಪಕ್ಷದ ಶಾಸಕರ್ಯಾರೂ ಬಂದಿಲ್ಲ, ಮಂತ್ರಿಗಳಿಗೆ ಅಸಮಧಾನ, ಈಗಲಾದರೂ ತಾವು ಸಾಧ್ಯವಾದರೆ, ಇದು ವಿಶೇಷ ಸಂದರ್ಭವಾದ್ದರಿಂದ ತಕ್ಷಣ ಆ ನೀರು ಬಿಡುವುದನ್ನು ನಿಲ್ಲಿಸಬೇಕೆಂದು ಒಂದು ನಿರ್ದೇಶನವನ್ನೇ ಕೊಡಬೇಕಾದೀತು, ಇದು ವಿಶೇಷ ಸಂದರ್ಭ.

ಶ್ರೀ ವಾಟಾಳ್ ನಾಗರಾಜ್:- ಒಂದು ಅಂಶ ಸ್ವಾಮಿ, ಇಷ್ಟೊಂದು ಗಂಭೀರವಾದಂಥ ಪ್ರಶ್ನೆ ಚರ್ಚೆಯಾಗುತ್ತಿರುವಾಗ, ಸರ್ಕಾರ ಬಹಿರಂಗವಾಗಿ, ಯಾರು ಏನೇ ಹೇಳಲಿ, ನಾವು ನೀರನ್ನು ಬಿಟ್ಟಿದ್ದೇವೆ ಎಂದು ಅದನ್ನು ಅವರು ಹೇಳಿದರು. ಇಡೀ ವಿರೋಧಪಕ್ಷಗಳು ಸಂಪೂರ್ಣವಾಗಿ ಇಲ್ಲಿ ಧರಣಿ ಮಾಡುತ್ತಿದ್ದಾರೆ, ಜವಾಬ್ದಾರಿಯಿಂದ ಸರ್ಕಾರ, ಏನು ತನ್ನ ಕರ್ತವ್ಯವನ್ನು ಮಾಡಬೇಕು? ಯಾವ ರೀತಿ ಇರಬೇಕೆಂದು ಗೊತ್ತಿಲ್ಲವೇ? ಹದಿನೈದು ಜನ ಶಾಸಕರು ಇಲ್ಲವೇ? ತಮಗೆ, ಈ ಸದನದ ಬಗ್ಗೆ ಅವರಿಗೆ ಎಷ್ಟು ಕಾಳಜಿ ಇದೆ, ಮತ್ತು ಗೌರವವಿದೆ ಎಂದು ಗೊತ್ತಾಗುತ್ತದೆ. ಅವರು ಏನು ತಿಳಿದುಕೊಂಡಿದ್ದಾರೆಂದರೆ, ಈ ಸರ್ಕಾರ ಕಟ್ಟಿಕೊಂಡು ಏನು ಆಗಬೇಕು ಈ ರಾಜ್ಯ ಕಟ್ಟಿಕೊಂಡು ಏನು ಆಗಬೇಕು, ಈ ಶಾಸನಸಭೆಯನ್ನು ಕಟ್ಟಿಕೊಂಡು ಏನು ಆಗಬೇಕು ಎನ್ನುವ ಈ ಭಾವನೆ ಅವರಲ್ಲಿ ನಿರ್ಮಾಣವಾದರೆ, ಇದು ಒಳ್ಳೆಯ ನೀತಿ ಏನು ಅಲ್ಲ. ತಾವೇ ನೋಡಿ.....

ಶ್ರೀ ಎಂ. ನಾರಾಯಣ ಸ್ವಾಮಿ:- ಮಾನ್ಯ ಅಧ್ಯಕ್ಷರೆ, ಆ ರೀತಿ ಇಲ್ಲ, ಊಟಕ್ಕೆ ಹೋಗಿದ್ದಾರೆ ಬರುತ್ತಿದ್ದಾರೆ. ಮಾನ್ಯ ವಾಟಾಳ್ ನಾಗಾರಾಜ್‌ರವರು ಹೇಳಿದ ರೀತಿ ಈ ಸದನದ ಬಗ್ಗೆ ಅಗೌರವವಾಗಲಿ, ತಾತ್ಸಾರವಾಗಲಿ ಯಾವುದೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಆಮೇಲೆ ಅವರು, ನೀವು ಧರಣಿ ಮಾಡುವುದು ನಾಟಕವೆಂದು ಹೇಳುತ್ತಾರೆ. ಅವರದು ನಿಜವಾದ ನಾಟಕ.

ಶ್ರೀ ಎಂ.ನಾರಾಯಣ ಸ್ವಾಮಿ:- ನಮ್ಮ ಎಲ್ಲಾ ಶಾಸಕರಿಗೂ ಕೂಡ ಕಾಳಜಿ ಇದೆ, ಶಾಸಕಾಂಗದ ಬಗ್ಗೆ ಕಾಳಜಿ ಇದೆ, ಎಲ್ಲಾ ಸದಸ್ಯರು ಬರುತ್ತಾರೆ.

ಶ್ರೀ ಡಿ.ಟಿ.ಜಯಕುಮರ್:- ಏಕೆಂದರೆ, ಅವರು ಸದನದ ಬಾವಿಯಲ್ಲಿರುವುದರಿಂದ ಆ ಗಂಭೀರತೆ ಇಲ್ಲ ಅಷ್ಟೆ, ಇದಕ್ಕೆಲ್ಲಾ ಕಾರಣರು ಅವರೆ, ನಾವಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರ ಬೆಂಬಲಕ್ಕೆ ಹತ್ತು ಜನ ಎಂ.ಎಲ್.ಎ.ಗಳಾದರು ಬೇಕು, ಅವರೂ ಇಲ್ಲ, ಇವರೂ ಇಲ್ಲ, ಕ್ಯಾಬಿ ಸೈ ವಾಬಿ ಸೈ ಎಂದು ಹಾಗೆ ಆಗಿದೆ ಅವರ ಗತಿ.

ಶ್ರೀ ಎಂ.ನಾರಾಯಣ ಸ್ವಾಮಿ:- ಮಾನ್ಯ ಅಧ್ಯಕ್ಷರೆ, ಏನಾಗಿದೆ ಎಂದರೆ, ಇಲ್ಲಿ ಧರಣಿ ಹೂಡುತ್ತಿದ್ದಾರೆಂದು ಸ್ವಲ್ಪ ನಿಧಾನಕ್ಕೆ ಬರತಕ್ಕಂಥದ್ದು ಇದೆ, ಅಷ್ಟೇ ಹೊರತಾಗಿ, ತಿರಸ್ಕಾರ, ತಾತ್ಸಾರ ಅದು ಅವರಿಗಿದೆ. ಏಕೆಂದರೆ, ಪ್ರತಿನಿತ್ಯ ಧರಣಿ ಹೂಡುವುದೇ ಅವರ ಕೆಲಸವಾಗಿದೆ. ಆದುದರಿಂದ ಶಾಸಕಾಂಗದ ಬಗ್ಗೆ ಅಥವಾ ಈ ಸದನದ ಬಗ್ಗೆ ಅವರಿಗೆ ತೀರಸ್ಕಾರವಿದೆ. ಇವತ್ತು ಈ ಸದನದಲ್ಲಿ ಕಾರ್ಯಕಲಾಪಗಳು ನಡೆಯದೆ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ಅವರೇ ಕಾರಣ.

ಅಧ್ಯಕ್ಷರು:- ನೀವು ಈ ಬೆಳಿಗ್ಗೇ ಮಾತನಾಡಿರುವುದೇ ಸಾಕು, ಮತ್ತೆ ಪುನ: ಈಗ ಏನು ಮಾತನಾಡುತ್ತೀರಿ?

ಶ್ರೀ ಎಂ.ನಾರಾಯಣ ಸ್ವಾಮಿ:- ಪೂಜಾರರೇ ತಮಗೆ ಗೊತ್ತಿದೆ, ಇವತ್ತು ಶಾಸಕಾಂಗ ಹೇಗೆ ನಡೆಯಬೇಕು ಅಥವಾ ಸದನ ಹೇಗೆ ನಡೆಯಬೇಕು ಅನ್ನತಕ್ಕಂಥಾದ್ದು. ತಾವು ಏನು ಮಾಡುತ್ತಿದ್ದೀರಿ, ಬರೀ ಧರಣಿ ಮಾಡುವುದು ಅಷ್ಟೇ.

ಶ್ರೀ ವಾಟಾಳ್ ನಾಗರಾಜ್:- ನಾರಾಯಣ ಸ್ವಾಮಿಯವರು ಜನತಾದಳದ ಕಾರ್ಯದರ್ಶಿ ಆದ ಮೇಲೆ ಅದರ ಹಣೆಬರಹ ಹೀಗಾಯಿತು. ಜನತಾದಳ ಪಕ್ಷಕ್ಕೆ ಯಾರೂ ಸಿಕ್ಕದೇ ನಮ್ಮ ಸ್ನೇಹಿತರಾದ

ನಾರಾಯಣಸ್ವಾಮಿ ಆಗಿರುವುದರಿಂದ ಪರಿಸ್ಥಿತಿ ಹೀಗೆ ಆಯಿತು. ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಇವರ ಹಣೆಬರಹ ಅಷ್ಟು ಕೆಟ್ಟದೆ.

(ಅನೇಕ ಸದಸ್ಯರುಗಳು ಧರಣಿ ಕುಳಿತಿದ್ದ ಸಚಿವರ ಬಾವಿಯಿಂದ ಮಾತನಾಡಿದರು)

ಅಧ್ಯಕ್ಷರು:- ನಾವು ಒಂದು ಪದ್ಧತಿ ಇಟ್ಟುಕೊಂಡಿದ್ದೇವೆ. ಹೇಳಿದ ಟೈಮ್‌ಗೆ ಬೆಲ್ ಹಾಕಿಸಿದ್ದೇನೆ. ಕೋರಂ ಆದ ಮೇಲೆ ನಾನು ಬಂದು ಕುಳಿತುಕೊಳ್ಳಬೇಕಲ್ಲ. ಅವರು ಬಂದಿದ್ದಾರೆ, ಇವರು ಬಂದಿದ್ದಾರೆ ಎಂದು ನಾನು ನೋಡಲಿಲ್ಲ.

(ಗೊಂದಲ)

ಅಧ್ಯಕ್ಷರು:- ಅನೇಕ ರೂಲಿಂಗ್‌ಗಳು ಇವೆ. ಕೆಲವು ಸದಸ್ಯರುಗಳು ಮಳೆ ತರಿಸುವುದಕ್ಕೇನಾದರೂ ಆ ಕಡೆ ಹೋದರೇ? ಎರಡೂ ಕಡೆಯ ಸಚೇತಕರು ದಕ್ಷಿಣ ಕನ್ನಡ ಜಿಲ್ಲೆಯವರೇ. ನಿಮ್ಮ ಸಚೇತಕರೂ ಅವರೇ, ನಮ್ಮ ಸಚೇತಕರೂ ಅವರೇ. ಗೃಹ ಇಲಾಖೆ ಅವರ ಕೈಯಲ್ಲೇ ಇದೆ. ವಿರೋಧ ಪಕ್ಷದ ನಾಯಕರು ಏನೋ ಹೇಳಿದರು, ನಿಮ್ಮ ನೀರಾವರಿ ಸಚಿವರಿಗೆ ರಕ್ಷಣೆ ಕೊಡಿ ಎಂದು. ಸಭಾನಾಯಕರೇ ಈಗ ಏನು ಮಾಡೋಣ.

ಶ್ರೀ ಜೆ.ಹೆಚ್.ಪಟೀಲ್:- ಅವರು ಸಹಕರಿಸಿದರೆ ನಾವು ಚರ್ಚೆಯನ್ನಾದರೂ ಪ್ರಾರಂಭ ಮಾಡೋಣ. ಈ ರೀತಿ ಮಾಡಿದರೆ ಹೇಗೆ? ಇಲ್ಲವೆಂದರೆ ಮುಂದಿನ ಕಾರ್ಯಕ್ರಮದಂತಾದರೂ ಹೋಗೋಣ.

ಅಧ್ಯಕ್ಷರು:- ಅವರು ಸಿಟ್ಟು ಮಾಡಿಕೊಂಡಿದ್ದಾರೆ. ಅವರೇ ಸಿಟ್ಟು ಮಾಡಿಕೊಂಡಿರುವಾಗ ನೀವು ಸಹಕರಿಸಿ ಎಂದರೆ ಅವರಾಗಿ ಅವರೇ ಸರಕಾರ ಕೊಡುತ್ತಾರೆ ಎಂದು ಹೇಳುವುದಕ್ಕೆ ಆಗುತ್ತದೆಯೇ.

ಶ್ರೀ ಜೆ.ಹೆಚ್.ಪಟೀಲ್:- ಅತ್ಯವಶ್ಯಕವಾಗಿ, ಅತ್ಯಂತ ವಿನಯವಾಗಿ ಕೇಳಿದೆ. ಸದನದ ಕಾರ್ಯಕಲಾಪಗಳು ಸ್ಥಗಿತವಾಗುವುದರಿಂದ ಯಾರಿಗೆ ಪ್ರಯೋಜನ? ಇದರಿಂದ ಯಾರಿಗಾದರೂ ಪ್ರಯೋಜನ ಆಗುವುದಾದರೆ ಆಯಿತು ಕುಳಿತುಕೊಳ್ಳಿ ಎನ್ನೋಣ. ಯಾರಿಗೂ ಪ್ರಯೋಜನ ಆಗುವುದಿಲ್ಲ. ವಿರೋಧ ಪಕ್ಷಗಳ ಶಕ್ತಿಯೂ ಸೇಫ್ ಆಗುವುದಿಲ್ಲ.

(ಗೊಂದಲ)

ಶ್ರೀ ಜೆ.ಹೆಚ್.ಪಟೀಲ್:- ರಾಜ್ಯಕ್ಕೆ ಹಿತ ಆಗಿದೆ, ಆಗಿಲ್ಲ ಎನ್ನುವುದನ್ನು ಚರ್ಚೆ ಮಾಡಿ ನಾವು ನಿಮಗೆ ಕನ್‌ವಿನ್ಸ್ ಮಾಡುತ್ತೇವೆ. ನಾವೇ ಬೇಕೇ ರಾಜ್ಯದ ಹಿತಕ್ಕೆ ಧಕ್ಕೆ ತರುವುದಕ್ಕೆ. ಯಾವಯಾವ ಲೆಕ್ಕಾಚಾರದ ಮೇಲೆ ನಾವು ಇವತ್ತು ನೀರು ಬಿಟ್ಟಿದ್ದೇವೆ ಎಂದು ಹೇಳುತ್ತೇವೆ, ತಾವು ಕುಳಿತು ಕೇಳಿದರೆ, ನಾವು ಹೇಳುತ್ತೇವೆ. ಚರ್ಚೆ ಮಾಡದಿದ್ದರೆ ಇದು ಹೇಗೆ ಗೊತ್ತಾಗುತ್ತದೆ?

ಅಧ್ಯಕ್ಷರು:- ಮುಖ್ಯ ಮಂತ್ರಿಗಳು ಮನವಿ ಮಾಡಿಕೊಂಡರಲ್ಲ. ನೀವು ಯಾರೂ ಅದಕ್ಕೆ ಪ್ರತಿಕ್ರಿಯಿಸುವುದಿಲ್ಲವೇ?

(ಗೊಂದಲ)

ಶ್ರೀ ಪಿ.ಎಸ್. ಪುಟ್ಟೇಗೌಡ:- ಮಾನ್ಯ ಅಧ್ಯಕ್ಷರೇ, ಬಹಳಷ್ಟು ಗಂಭೀರವಾದಂಥ ವಿಚಾರ ಚರ್ಚೆ ಮಾಡುತ್ತಾರೆ ಎಂದು ಹೇಳಿ, ಯಾವುದೇ ವಿಚಾರವನ್ನು ಚರ್ಚೆ ಮಾಡುವುದಕ್ಕೆ ನಮ್ಮ ಸಭಾ

ನಾಯಕರು ಕರೆದಾಗ ಅದಕ್ಕೆ ಬರದೇ, ಕುಳಿತು ಚರ್ಚೆ ಮಾಡದೇ, ಸರ್ಕಾರ ಕೇವಲ ಒಂದು ಸೈಡಿನಲ್ಲಿ ನಿಂತು ಹೀಗೆ ಮಾಡಿ ಎಂದು ಹೇಳಿದರೆ ಹಾಗೆ ತೀರ್ಮಾನ ತೆಗೆದುಕೊಳ್ಳುವುದಾದರೆ ಬಹುಶ: ಈ 40 - 45 ವರ್ಷಗಳಲ್ಲಿ ಬಹಳ ಜನ ಮುಖ್ಯ ಮಂತ್ರಿಗಳು ಈ ವಿಧಾನಸೌಧದಲ್ಲಿ ಕುಳಿತು ಈ ರಾಜ್ಯದ ಅಧಿಕಾರ ಸೂತ್ರವನ್ನು ಹಿಡಿದಿದ್ದಾರೆ, ಹಾಗೆ ನಡೆದಿದ್ದರೆ ಆಗಬಹುದು. ಇಲ್ಲದಿದ್ದರೆ ಇದು ಏನು ಸ್ವಾಮಿ? ಎಂಥೆಂಥ ಗಂಭೀರವಾದ ವಿಚಾರಗಳು ಇವತ್ತು ಚರ್ಚೆಗಿವೆ, ಇವತ್ತು ಹಳ್ಳಿಗಳಲ್ಲಿ ರೈತನಿಗೆ ಕರೆಂಟು ಇಲ್ಲ, ಅದರ ಬಗ್ಗೆ ಚರ್ಚೆ ಮಾಡಬೇಕಾಗಿದೆ, ಅವನಿಗೆ ಇವತ್ತು ಗೊಬ್ಬರದ ಸಮಸ್ಯೆ ಇದೆ. ಬಹಳಷ್ಟು ಸಮಸ್ಯೆಗಳು ಇವೆ. ಇಲ್ಲಿ ಏನಾಗಿದೆ ಎಂದರೆ ಇದು ಒಂದು ಹೊಸ ಪದ್ಧತಿಯಾಗಿದೆ. ನಾವು ಬೆಳಿಗ್ಗೆ ಎದ್ದರೆ ಪೇಪರ್‌ನಲ್ಲಿ ನೋಡುತ್ತೇವೆ ವಿರೋಧ ಪಕ್ಷದವರದು ಒಂದೇ ಕೆಲಸ. ಒಂದು ಅಂಶದ ಕಾರ್ಯಕ್ರಮ ಆಗುವುದಾದರೆ ಯಾರೂ ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲ. ಇವರೆಲ್ಲಾ ಅಲ್ಲಿ ಕುಳಿತಾಗ ಏನು ಮಾಡಿದರು ಎಂದು ಹಿಂದಿನದೆಲ್ಲಾ ಒಂದು ಸಲ ದಯಮಾಡಿ ನೆನೆಸಿಕೊಳ್ಳಲಿ ಈಗ ಏನಾಗುತ್ತದೆ ಎಂದರೆ , ಮೊದಲೇ ಜನಗಳು ನಮ್ಮನ್ನು ನೋಡಿ ರಾಜಕೀಯದವರು ಎಂದು ನಗುವ ಪರಿಸ್ಥಿತಿ ಬಂದಿದೆ. ಆ ಕಡೆಯವರೇ ಆಗಲಿ ಅಲಿ, ಈ ಕಡೆಯವರೇ ಆಗಲಿ, ಬೆಳಿಗ್ಗೆ ಎದ್ದರೆ ಇದು ಒಂದು ತರಹಸದ ನಾಟಕ, ರಾತ್ರಿ ಹೊತ್ತು ಎಲ್ಲಾ ಒಂದು ಕಡೆ ಸೇರಿ ಮಾತನಾಡುತ್ತಾರೆ, ಬೆಳಿಗ್ಗೆ ಜನಕ್ಕೆ ಕಾಣುವ ಹಾಗೆ ಕುರುಕ್ಷೇತ್ರದಲ್ಲಿ ಭೀಮ ದುರ್ಯೋಧನ ಮಾಡಿದ ಹಾಗೆ ಮಾಡುತ್ತಾರೆ ಎನ್ನುತ್ತಾರೆ, ಮತ್ತೆ ಇದು ಇನ್ನೂ ಈ ರಾಜ್ಯದ ಜನಗಳಿಗೆ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಇದು ಒಳ್ಳೆಯದಲ್ಲ. ಇದಕ್ಕೆ ನಮ್ಮ ಮುಖ್ಯ ಮಂತ್ರಿಗಳು ಮತ್ತು ನಮ್ಮ ಸರ್ಕಾರ ಬದ್ಧವಾಗಿ ಇದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡುವುದಕ್ಕೆ ಸಿದ್ಧವಿದೆ, ನೀರನ್ನು ಏಕೆ ಬಿಟ್ಟರು? ಎಷ್ಟು ನೀರು ಇದೆ? ನೀರು ಬಿಡುವುದರಿಂದ ಈ ರಾಜ್ಯದ ಜನತೆಯ ಹಿತಕ್ಕೆ ಎಷ್ಟು ಧಕ್ಕೆಯಾಗುತ್ತದೆ ಎನ್ನುವುದನ್ನು ನಾವು ಚರ್ಚೆ ಮಾಡುವುದಕ್ಕೆ ಸಿದ್ಧವಿದ್ದಾಗ ಈ ರೀತಿ ಮೊಂಡುತನ ಮಾಡುವುದು ಒಳ್ಳೆಯದಲ್ಲ. ಬಹಳ ಜನ ಹಿರಿಯ ಮಖಂಡರಿದ್ದಾರೆ.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೇ, ನಾನು ಒಂದು ಮಾತು ಹೇಳುತೇನೆ ಕೇಳಿ. ಚರ್ಚೆಗೆ ಖಂಡಿತವಾಗಿಯೂ ನಾವು ಮಾನ್ಯತೆ ಮಾಡುತ್ತೇವೆ. ನಿನ್ನೆಯೂ ಕೂಡ ಕೆ ಇ ಬಿ ವಿದ್ಯುತ್ ದರ ಏರಿಸಿದ ಬಗ್ಗೆ ಚರ್ಚೆ ಮಾಡಬೇಕು ಎಂದು ಹೇಳುವ ನಿರ್ಣಯವನ್ನು ನಾವು ಕೈಗೊಂಡಿದ್ದೆವು. ಆದರೆ ಅದಕ್ಕಿಂತ ಮೊದಲು ದರ ಏರಿಕೆಯನ್ನು ನಿಲ್ಲಿಸಬೇಕು, ಹೊಸ ದರ ಬರುವತನಕ ಸ್ಥಗಿತ ಆದೇಶ ಕೊಡಬೇಕು ಎಂದು ಹೇಳುವಂಥ ಮನವಿ ಮಾಡಿದ್ದೆವು. ಅದೇ ಪ್ರಕಾರ ಅವರು ಮಾಡಿದ್ದಾರೆ. ಇವತ್ತು ಅವರು 5 ಟಿ ಎಂ ಸಿ ನೀರನ್ನು ಬಿಡುಗಡೆ ಮಾಡುವಂಥ ಆದೇಶ ಕೊಟ್ಟಿದಾದರೆ. ಇವತ್ತು ಅವರು ಆ ಆದೇಶವನ್ನು ಹಿಂತೆಗೆದುಕೊಳ್ಳಲಿ, ಆಮೇಲೆ ನಾವು ಚರ್ಚೆಗೆ ಬರುತ್ತೇವೆ, ಚರ್ಚೆ ಮಾಡೋಣ. ಇದು ರಾಜ್ಯದ ಹಿತದೃಷ್ಟಿಯಿಂದ 5 ಟಿ ಎಂ ಸಿ ನೀರು ಬಿಡುಗಡೆಯ ಆದೇಶವನ್ನು ಸ್ಥಗಿತ ಗೊಳಿಸಬೇಕೆಂಬುದು ನಮ್ಮ ಭಿನ್ನಹ.

ಶ್ರೀ ಸಿ.ಎಸ್.ಪುಟ್ಟೇಗೌಡ:- ಮಾನ್ಯ ಅಧ್ಯಕ್ಷರೆ, ಅಧಿಕಾರರೂಢ ಪಕ್ಷವೆಂದು ಹೇಳಿ ಅಧಿಕಾರ ಸೂತ್ರ ಹಿಡಿಯುವದಕ್ಕೆ ಒಂದು ಅವಕಾಶ ಕೊಟ್ಟು ಈ ರಾಜ್ಯಾಂಗದಲ್ಲಿ ಅದಕ್ಕೆ ಅದರದೆ ಆದಂಥ ಕ್ರಮಬದ್ಧತೆ ಇಲ್ಲವೇ ಸ್ವಾಮಿ. ಈಗ ಎಲ್ಲವನ್ನು ಹೇಳಿದಂತೆಯೇ ಕೇಳುವುದಾದರೆ ಸರ್ಕಾರವನ್ನು

ನಡೆಸುವುದಾದರೂ ಹೇಗೆ? ಹಿಂದೆ ಎಲ್ಲ ಇದೇ ರೀತಿ ನಡೆದಿತ್ತೇ? ದೊಡ್ಡ ದೊಡ್ಡವರು ಅಂದರೆ 25-30 ವರ್ಷ ಶಾಸನಸಭೆಯಲ್ಲಿ ಕುಳಿತು ಅಧಿಕಾರ ಮಾಡಿದವರು ಇದ್ದಾರೆ.. ಅಧಿಕಾರ ಮಾಡಿದ ಮೇಲೆ ಈಗ ವಿರೋಧ ಪಕ್ಷದಲ್ಲಿ ಕುಳಿತಿದ್ದಾರೆ. ಹಿಂದೆಲ್ಲ ಇದೇ ರೀತಿ ನಡೆದುಕೊಂಡು ಬಂದಿದೆಯೇ?

★**ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ):-** ಮಾನ್ಯ ಅಧ್ಯಕ್ಷರೇ, ಕರೆಗಂಟೆಯನ್ನು ನಿಲ್ಲಿಸಿ ಹೆಚ್ಚು ಕಡಿಮೆ ಸುಮಾರು 35 ನಿಮಿಷ ಆಯಿತು. ಶಿವರಾಮೇಗೌಡರು ಈಗ ತಾನೆ ಎಲ್ಲೋ ಹೋಗಿ ಬಂದಿದ್ದಾರೆ. ಅವರು ಯಾವಾಗ ಬೇಕಾದರೂ ಹೋಗಬಹುದು, ಯಾವಾಗ ಬೇಕಾದರೂ ಬರಬಹುದು. ನಮಗೆ ಆ ತರಹ ಇಲ್ಲ. ನಾವು ಸರಿಯಾಗಿ 11 ಗಂಟೆಗೆ ಬಂದರೆ ರಾತ್ರಿ 6 ಗಂಟೆಗೆ ಹೋಗುತ್ತೇವೆ. ತಾವು ಹೋಗಿ ಎನ್ನುವವರೆಗೆ ನಾವು ಇಲ್ಲಿಯೇ ಇರುತೇವೆ. ಆದ್ದರಿಂದ ಅವರು ಈಗ ಎಲ್ಲಿಂದಲೋ ಬಂದು 5 ನಿಮಿಷ, 5 ನಿಮಿಷ ಎಂದು ಏನು ಹೇಳುತ್ತಾರೋ ನನಗೆ ಅರ್ಥವಾಗುತ್ತಾ ಇಲ್ಲ. ಅದು ಇರಲಿ. ಅವರು ಕಾವೇರಿ ಕಡೆಯಿಂದ ಬಂದಿದ್ದಾರಂತೆ. ನಾಗಮಂಗಲದ ಕಡೆಯಿಂದ, ಕಾವೇರಿ ಕಡೆಯಿಂದ ಬಂದಿದ್ದೇನೆಂದು ಹೇಳುತ್ತಾರೆ ಹೇಳಲಿ. ಅದರ ಬಗ್ಗೆ ತಕರಾರು ಇಲ್ಲ. ಈಗ ಸರ್ಕಾರಕ್ಕೆ ತೀವ್ರವಾದಂಥ ಕಾಳಜಿ ಇದ್ದಿದ್ದರೆ, ನಾವೇನೂ ಮುಖ್ಯಮಂತ್ರಿಗಳ ಬಗ್ಗೆ ವೈಯಕ್ತಿಕವಾಗಿ ಧರಣಿ ಮಾಡುತ್ತೇವೆ ಎನ್ನುವುದಾಗಲೀ ಅಥವಾ ಅವರ ಆಡಳಿತವನ್ನು ವಿರೋಧ ಮಾಡುತ್ತೇವೆ ಎನ್ನುವಂಥ ಪ್ರಶ್ನೆ ಅಲ್ಲ. ಸ್ಪಷ್ಟವಾಗಿ ನಾವು ಹೇಳುತ್ತಾ ಇದ್ದೇವೆ. ನಿನ್ನೆಯವರೆವಿಗೆ ಯಾರಿಗೂ ಗೊತ್ತಿಲ್ಲದೆ ಗೋಪ್ಯವಾಗಿ ಇಟ್ಟು ನಮ್ಮನ್ನು ನೀವು ಸಭೆಗೆ ಕರೆದು ಸಭೆಯಲ್ಲಿ ಯಾವುದೇ ತೀರ್ಮಾನ ಇಲ್ಲದೆ ಯಾವುದೋ ಒಂದು ಗೋಪ್ಯವನ್ನು ಹೇಳುತ್ತೇವೆಂದು ಹೇಳಿ ಆ ಗೋಪ್ಯವಾಗಿ ಹೇಳತಕ್ಕಂಥ ವಿಚಾರವನ್ನೂ ನಮಗೆ ತಿಳಿಸದೆ ಏಕಾಏಕಿ ನೀರನ್ನು ಬಿಟ್ಟರತಕ್ಕಂಥದ್ದು. ಈಗ ತಾನೆ ಅವರು ಹೇಳಿದ ಪ್ರಕಾರ ಈ 5 ಟಿಎಂಸಿ ನೀರು ತಲುಪಬೇಕಾದರೆ 10 ದಿವಸ ಹಿಡಿಯುತ್ತದೆ. ಅಂದರೆ ನೀರನ್ನು ಇವತ್ತು ಬಿಟ್ಟಿರುವುದು ಅಲ್ಲ. ನಿನ್ನೆ ರಾತ್ರಿಯಿಂದ ಬಿಟ್ಟಿದ್ದಾರೆ. ನಾನು ಸರ್ಕಾರವನ್ನು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಈಗ ತಕ್ಷಣಕ್ಕೆ ಅವರು ನೀರನ್ನು ನಿಲ್ಲಿಸಿ ಮಾತುಕತೆಗೆ ಕರೆಯಲಿ. ಆ ಮೇಲೆ ಏನು ಎನ್ನತಕ್ಕಂಥ ಮಾತುಕತೆ ಆಡುತ್ತೇವೆ. ಈ ರೀತಿ ಮಾಡದಿದ್ದರೆ ನಮ್ಮ ಧರಣಿ ಹೀಗೆಯೇ ಇರುತ್ತದೆ, ಆ ಕಡೆ ಸದಸ್ಯರುಗಳು ಒಂದು ಗಂಟೆಯಾದರೂ ಇರುವುದು ಕಾಣೆ. ಈ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದರಿಂದ ಗೊಂದಲವಾದಂಥ ವಾತಾವರಣ ಉಂಟಾಗುತ್ತದೆ. ದಯಮಾಡಿ ತಾವು ಈ ಸಭೆಯನ್ನು ಮುಂದಕ್ಕೆ ಹಾಕುತ್ತೀರೆಂದು ನಾನು ಅಂದುಕೊಂಡಿದ್ದೇನೆ. ಇಲ್ಲದಿದ್ದರತ ಈ ಸಮಸ್ಯೆ ಬಗೆಹರಿಯುವುದಿಲ್ಲ. ಈ ಸಭೆಯನ್ನು ಮುಂದಕ್ಕೆ ಹಾಕಿ ಎಂದು ನಾನು ತಮಗೆ ಮನವಿ ಮಾಡುತ್ತೇನೆ.

★**ಶ್ರೀ ಎಲ್.ಆರ್.ಶಿವರಾಮೇಗೌಡ (ನಾಗಮಂಗಲ)-:-** ಮಾನ್ಯ ಅಧ್ಯಕ್ಷರೇ, ಕಳೆದ 4 ದಿವಸಗಳಿಂದ ವಿಧಾನಸಭೆಯ ಅಧಿವೇಶದ ಪ್ರಾರಂಭವಾದ ಮೇಲೆ ಏನು ನಡೆಯುತ್ತಿದೆ ಎನ್ನತಕ್ಕಂಥದ್ದನ್ನು ಈ ರಾಜ್ಯದ ಜನತೆಗೆ ಗೊತ್ತಾಗುತ್ತಾ ಇದೆ.

(ಗೊಂದಲ)

ಶ್ರೀ ಎಲ್.ಆರ್.ಶಿವರಾಮೇಗೌಡ :- ಜನ ತೀರ್ಮಾನ ಕೊಟ್ಟಿದ್ದಾರೆ, ಜನ ತೀರ್ಮಾನ ಕೊಟ್ಟು 3 ತಿಂಗಳೂ ಕೂಡ ಆಗಿಲ್ಲ ಮಾನ್ಯ ಅಧ್ಯಕ್ಷರೇ, ತಾವು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ,

ಅದೇನೆಂದರೆ ಪ್ರಶ್ನೋತ್ತರ ವೇಳೆ ಬಹಳ ಅಮೂಲ್ಯವಾಗಿರತಕ್ಕಂಥದ್ದು, ಸದನವನ್ನು ನಿಯಮಾವಳಿ ಪ್ರಕಾರ ತೆಗೆದುಕೊಂಡು ಹೋಗಬೇಕು ಅದಕ್ಕೆ ನೀವು ಸಹಕಾರ ಕೊಡಿ ಎಂದು. ಚರ್ಚೆಗೆ ಬನ್ನಿ ಎನ್ನತಕ್ಕಂಥ ಮಾತನ್ನು ಮಾನ್ಯ ಸಭಾನಾಯಕರು ಹೇಳಿದ್ದಾರೆ. ಬಿಜೆಪಿ ಸ್ನೇಹಿತರ ಸರ್ಕಾರ ನಡೆಸಿಲ್ಲ, ಅವರು ಹೇಳಿದ್ದಕ್ಕೆ ನಾನು ಒಪ್ಪುತ್ತೇನೆ. ಕಾಂಗ್ರೆಸ್ ಪುಣ್ಯಾತ್ಮರುಗಳು ಸರ್ಕಾರ ನಡೆಸಿ ನೀರು ಬಿಟ್ಟಿಲ್ಲ ಎಂದು ಹೇಳಿದರೆ ಬೇಕಾದರೆ ಅಂಕಿಅಂಶ ತೆಗೆದುಕೊಂಡು ನೋಡಿ. ನಾನು ಕೂಡ ಅಲ್ಲಿಯೇ ಇದ್ದೆ. ಆದ್ದರಿಂದ ದಯವಿಟ್ಟು ಕೇಳಿ. ಕಾಂಗ್ರೆಸ್‌ನವರು ನೀರು ಬಿಟ್ಟು ಈ ಸದನಕ್ಕೆ ಸುಳ್ಳು ಹೇಳಿಕೆ ಕೊಟ್ಟಿರತಕ್ಕಂಥದನ್ನು ಯಾರೂ ಮರೆತಿಲ್ಲ. ಕಳೆದ ಸಾರಿ 5 ಟಿಎಂಸಿ ನೀರು ಬಿಡಿ ಎಂದು ನರಸಿಂಹರಾಯರೇ ಆದೇಶ ಕೊಟ್ಟರು. ಅವರು ನೀರು ಕೊಡಿ ಎಂದು ಹೇಳುವಾಗ ನೀವು ಬಾಯಿ ಮುಚ್ಚಿಕೊಂಡು ಇಲ್ಲಿ ಕುಳಿತಿದ್ದೀರಿ. ಆಗ ಎಲ್ಲಿ ಹೋಗಿತ್ತು ನಿಮ್ಮ ಧರಣಿ ಈಗ ರಾಜ್ಯದ ಮೇಲೆ ಮೊಸಳೆ ಕಣ್ಣೀರು ಹರಿಸುತ್ತಿದ್ದೀರಿ. ನಾನೂ ಅಲ್ಲಿಯೇ ಇದ್ದೆ. ದಯವಿಟ್ಟು ಹೇಳಿ ಇವತ್ತು ಕಾವೇರಿ ತಪ್ಪಲಿನಲ್ಲಿ ನಮ್ಮ ನೀರು ಹಿಡಿದುಕೊಂಡು ರಾಜಕೀಯ ಮಾಡಬೇಡಿ. ಯಾವುದೇ ಚುನಾವಣೆ ಇಲ್ಲ. ಚುನಾವಣೆ ಬರುವುದಕ್ಕೆ ಇನ್ನೂ ಮೂರೂವರೆ ವರ್ಷ ಇದೆ. ಮಂಡ್ಯಾ ಮತ್ತು ಕಾವೇರಿಗೆ ಸಂಬಂಧಪಟ್ಟಿರತಕ್ಕಂಥ ನೀರಿನ ಮೇಲೆ ರಾಜಕೀಯ ಮಾಡಬೇಡಿ. ಈಗ 5 ಟಿಎಂಸಿ ನೀರನ್ನು ಬಿಟ್ಟಮೇಲೆ ಮಾನ್ಯ ಅಧ್ಯಕ್ಷರೆ, ಚುನಾವಣೆಗೆ ಹೋಗಿದ್ದೆವು, ಪ್ರಮೀಳಾ ನೇಸರ್ಗಿಯವರು ಹೇಳಿದರು ದೇವೇಗೌಡರೆ ಕಾವೇರಿ ಪೂಜೆ ಮಾಡುವುದಕ್ಕೆ ಯಾವಾಗ ಬರುತ್ತೀರಿ ಎಂದು ಕೇಳಿದಾಗ ದೇವೇಗೌಡರು ಇದೇ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಮಂಡ್ಯದಾದ್ಯಂತ ರೈತರು ಸ್ವಾಗತ ಮಾಡಿ ಕರೆದುಕೊಂಡು ಬಂದಿದ್ದೇವೆ. ನೀವು ಬೇಕಾದರೆ ಚರ್ಚೆ ಮಾಡಿ. ಅದು ನಿಮ್ಮ ಹಕ್ಕು. ಅದನ್ನು ಯಾರೂ ಬೇಡ ಎಂದು ಹೇಳುವುದಿಲ್ಲ. ಮೂರು ದಿವಸದಿಂದ ಮಕ್ಕಳು ಚಂಡಿ ಹಿಡಿಯುತ್ತಾರಲ್ಲ ಆ ರೀತಿ ಚಂಡಿ ಹಿಡಿದುಕೊಂಡು ನೀವು ಚರ್ಚೆಗೂ ಬರುವುದಿಲ್ಲ, ನೀರೂ ಬಿಡುವುದಿಲ್ಲ. ಕಾವೇರಿ ನಿಮ್ಮ ಪಕ್ಷದ ಸ್ವತ್ತಲ್ಲ ಕಾವೇರಿ ಈ ರಾಜ್ಯದ ಸ್ವತ್ತು. ದಯವಿಟ್ಟು ಕೇಳಿ. ಮಾನ್ಯ ಸಭಾಧ್ಯಕ್ಷರೆ, ನಾನು ಈಗಲೂ ಅಹಿತ ಎಲ್ಲಾ ಹಿರಿಯ ಮತ್ತು ಕಿರಿಯ ಸ್ನೇಹಿತರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದಯಮಾಡಿ ಈ ಒಂದು ಸದನ ಸರಿಯಾಗಿ ನಿಯಮಾವಳಿ ಪ್ರಕಾರ ನಡೆಯಲಿಕ್ಕೆ ಅವಕಾಶ ಕೊಡಿ. ಇವತ್ತು ಚರ್ಚೆಗೆ ಬನ್ನಿ ಎಂದು ಮಾನ್ಯ ಸಭಾನಾಯಕರು ಆದೇಶ ಕೊಟ್ಟಿದ್ದಾರೆ. ನೀವೆಲ್ಲರೂ ಸಹಿತ ಚರ್ಚೆಗೆ ಬಂದರೆ ಆ ಚರ್ಚೆಯಲ್ಲಿದ್ದು ನೀವು ಏನು ತೀರ್ಮಾನ ತೆಗೆದುಕೊಳ್ಳುತ್ತಿರೋ ತೆಗೆದುಕೊಳ್ಳಿ, ಚರ್ಚೆಯಲ್ಲಿ ಮಾತುಕತೆಯಾಗಿ ನೀವು ವಿಫಲರಾದರೆ ಈ ಆಟ ಆಡಬಹುದು. ಅದನ್ನು ಬಿಟ್ಟು ಏಕಾಏಕಿ ಬರೀ ಧರಣಿ ಮಾಡುತ್ತೇವೆ, ಸ್ಟೈಕ್ ಮಾಡುತ್ತೇವೆ ಎನ್ನತಕ್ಕಂಥದ್ದನ್ನು ಮುಂದಿಟ್ಟುಕೊಂಡು ನೀವು ಹೋಗತಕ್ಕ ಥದ್ದು ಸೂಕ್ತ ಅಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ನಾವು ಸಹ ಕಾವೇರಿ ತಪ್ಪಲಿನಲ್ಲಿ ಇರತಕ್ಕಂಥವರು, ಕಾವೇರಿ ಇದು ನಮಗೆ ಕಮಿಟ್‌ಮೆಂಟ್ ಇರತಕ್ಕಂಥದ್ದು, ನೀವು ಕೇವಲ ತಲಕಾವೇರಿ ನೀರಿನ ಮೇಲೆ ವಿಧಾನಸಭೆಯಲ್ಲಿ ರಾಜಕೀಯ ಮಾಡತಕ್ಕಂಥದ್ದು ಸೂಕ್ತವಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಕಳಕಳಿಯಿಂದ ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

★**ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ):-** ಮಾನ್ಯ ಅಧ್ಯಕ್ಷರೆ, ನಾನು ಎಲ್ಲಾ ವಿರೋಧ ಪಕ್ಷದ ಮುಖಂಡರನ್ನು ಕೂಡ ವಿನಂತಿ ಮಾಡುತ್ತಿದ್ದೇನೆ. ಈಗ ಬಂದಿರತಕ್ಕಂಥ ಸಮಸ್ಯೆ ಇಷ್ಟೆ. ವಿರೋಧ

ಪಕ್ಷಗಳನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳದೆ ಏಕಾಏಕಿ ನೀರನ್ನು ಬಿಟ್ಟಿದ್ದಾರೆ. ಅದು ಬಹಳ ಗಂಭೀರವಾದಂಥ ಪ್ರಶ್ನೆಯಾದ್ದರಿಂದ ಈ ಸಮಸ್ಯೆ ಉದ್ಭವವಾಗಿದೆ. ಇಲ್ಲಿ ಹಿರಿಯರು ಇದ್ದಾರೆ. ಆಡಳಿತ ನಡೆಸಿದಂಥವರು ಇದ್ದಾರೆ ಎಲ್ಲಾ ಸಂದರ್ಭಗಳಲ್ಲಿಯೂ ಕಾವೇರಿ ನೀರನ್ನು ಬಿಟ್ಟಿದ್ದಾರೆ. ಬಿಡದೆ ಇರತಕ್ಕಂಥವರು ಇದರಲ್ಲಿ ಯಾರೂ ಇಲ್ಲ. ಮತ್ತೆ ಮುಂದೆ ಯಾರಾದರೂ ಸರ್ಕಾರ ಮಾಡಿದರೆ ಅವರೂ ಸಹ ನೀರು ಬಡಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಮಾಡಿರತಕ್ಕಂಥ ಒಂದೇ ಒಂದು ತಪ್ಪು ಏನೆಂದು ಹೇಳಿದರೆ ನಿನ್ನೆ ಸಭೆ ಕರೆದು ಆ ಸಭೆಯಲ್ಲಿ ಚರ್ಚೆಗೆ ಬಾರದೆ, ಇವತ್ತು ಏಕಾಏಕಿ ಕನಿಷ್ಟ ವಿರೋಧಪಕ್ಷದವರನ್ನು ಕರೆಸಿ ಪರಿಸ್ಥಿತಿ ಹಿಂದೆ, ನಾವು ನೀರು ಬಿಡಬೇಕಾದಂಥ ಪರಿಸ್ಥಿತಿ ಏನು ಇದೆ, ಏಕೆ ನೀರು ಬಿಡಬೇಕಾಗಿ ಬಂದಿದೆ ಎಂದು ಹೇಳತಕ್ಕಂಥದ್ದನ್ನು ಹೇಳಿ ಎಲ್ಲಾ ವಿರೋಧ ಪಕ್ಷದ ಮುಖಂಡರನ್ನು ಕರೆದು ಅವರನ್ನು ನಂಬಿಕೆಗೆ ತೆಗೆದುಕೊಂಡು ಈ ಕೆಲಸ ಮಾಡಬೇಕಾಗಿತ್ತು. ಅದನ್ನು ಮಾಡದೇ ಇರುವುದರಿಂದ ಈ ಸಮಸ್ಯೆ ಉದ್ಭವವಾಗಿದೆ. ಅಷ್ಟು ಬಿಟ್ಟರೆ ನೀರು ಬಿಡಬಾರದು ಅಥವಾ ನೀರು ಬಿಡತಕ್ಕಂಥ ಪ್ರಶ್ನೆ ಏನಿದೆ ಹಿರಿಯರು ಅನುಭವ ಇರತಕ್ಕಂಥವರು ಇಲ್ಲಿ ಇದ್ದಾರೆ, ನೀರು ಬಿಡಲೇ ಬೇಕಾದಂಥ ಪರಿಸ್ಥಿತಿ ಇದೆ. ಅಂತಹ ಪರಿಸ್ಥಿತಿಯಲ್ಲಿ ಯಾರೂ ಇದ್ದರೂ ಸಹ ನೀರನ್ನು ಬಿಡುತ್ತಾ ಇದ್ದರು. ಅದನ್ನು ಇವತ್ತು ಪ್ರತಿಷ್ಠೆ ಪ್ರಶ್ನೆಯಾಗಿ ತೆಗೆದುಕೊಂಡು, ಈ ಸದನದಲ್ಲಿ ಚರ್ಚೆಯಾಗಬೇಕಾಗಿರತಕ್ಕಂಥದ್ದು ಹಲವಾರು ವಿಷಯಗಳು ಇವೆ. ಕಾವೇರಿ ವಿಷಯ ಕೂಡ ಚರ್ಚೆಯಾಗಬೇಕಾಗಿದೆ. ಆದ್ದರಿಂದ ನಾನು ಸರ್ಕಾರ ಮತ್ತು ವಿರೋಧ ಪಕ್ಷಗಳು ಎರಡನ್ನೂ ಕೂಡ ಮನವಿ ಮಾಡುತ್ತಾ ಇದ್ದೇನೆ. ದಯವಿಟ್ಟು ವಿಕೋಪಕ್ಕೆ ತೆಗೆದುಕೊಂಡು ಹೋಗದೆ ಪರಿಸ್ಥಿತಿಯನ್ನು ಸುಧಾರಿಸುವ ರೀತಿಯಲ್ಲಿ ಚರ್ಚೆ ಮಾಡಿ ಸಮಸ್ಯೆಯನ್ನು ಬಗೆಹರಿಸಲಿಕ್ಕೆ, ಸದನವನ್ನು ನಡೆಯಲಿಕ್ಕೆ ಬಿಡಬೇಕೆಂದು ತಮ್ಮ ಮುಖಾಂತರ ನಾನು ವಿರೋಧ ಪಕ್ಷದ ಮುಖಂಡರನ್ನು ಮತ್ತು ಆಡಳಿತ ಪಕ್ಷದವರನ್ನು ವಿನಂತಿ ಮಾಡುತ್ತಿದ್ದೇನೆ.

ಅಧ್ಯಕ್ಷರು:- ಗದ್ದಿಯವರೇ ಬೆಳಿಗ್ಗೆ ನಿಮ್ಮನ್ನು ಪೋಲೀಸರು ಅರೆಸ್ಟ್ ಮಾಡಿದ್ದರೇ? ಯಾವತ್ತು? ನೋಟೀಸು ಬಂತು ಅದಕ್ಕೆ ಕೇಳಿದೆ. ಈಗ ನಮ್ಮ ಪ್ರೋಗ್ರಾಂ.ಪ್ರಕಾರ ಇವತ್ತು ಡಿಮ್ಯಾಂಡ್ಸ್ ಓಟಿಗೆ ಹಾಕಬೇಕು. ಈಗ ಸ್ವಲ್ಪ ಹೊತ್ತು ಸಭೆಯನ್ನು ಮುಂದಕ್ಕೆ ಹಾಕುತ್ತೇನೆ. ಆ ಮೇಲೆ ಬಂದಾಗ ಅವರು ಚರ್ಚೆಗೆ ತೆಗೆದುಕೊಂಡರೆ ನಾಳೆ ಓಟಿಗೆ ಹಾಕುತ್ತೇನೆ. ಇಲ್ಲದೆ ಹೋದರೆ ಆ ಡಿಮ್ಯಾಂಡ್ಸ್‌ನ್ನು ಇವತ್ತು ಮುಗಿಸಿ ಬಿಡೋಣ ಅಷ್ಟೇ. ಇನ್ನು ಏನು ಮಾಡಲಿ. ನಾನು ಇದರಲ್ಲಿ ಅಸಹಾಯಕ. ಪ್ರತಿಪಕ್ಷದ ನಾಯಕರು ಎಲ್ಲಿ? ಯಡಿಯೂರಪ್ಪನವರು ಎಲ್ಲಿ ಆಚೆ ಇದ್ದಾರೆಯೇ? ಖರ್ಗೆ ಸಾಹೇಬರು ಅಲ್ಲಿ ಕುಳಿತಿದ್ದಾರೆ. ಏನು ಮಾಡಲಿ, ಸಭೆಯನ್ನು ಮುಂದಕ್ಕೆ ಹಾಕಲೇ? ನಿಮ್ಮನ್ನು ಇಲ್ಲಿ ನಿಲ್ಲಿಸಿಕೊಂಡು ಸಭೆ ನಡೆಸುವುದಕ್ಕೆ ನನಗೆ ಇಷ್ಟ ಇಲ್ಲ. ಹಿಂದೆ ಹೋಗುವುದಕ್ಕೆ ನೀವು ತಯಾರು ಇಲ್ಲ, ನೀರು ನಿಲ್ಲಿಸುವುದಕ್ಕೆ- ಅವರು ತಯಾರಾಗಿಲ್ಲ. ಈಗ ಸಭೆಯನ್ನು ಮುಂದಕ್ಕೆ ಹಾಕುತ್ತೇನೆ. ಪುನ: 5 ಗಂಟೆಗೆ ಸೇರೋಣ.

(ಸಭೆಯು ಮಧ್ಯಾಹ್ನ 3-41ಕ್ಕೆ ಮುಕ್ತಾಯಗೊಂಡು ಪುನ: ಸಂಜೆ 5 ಗಂಟೆಗೆ ಸೇರಲು ನಿಶ್ಚಯಿಸಿತು)

(ಸಭೆಯು ಪುನ: 5-30ಕ್ಕೆ ಸಮಾವೇಶಗೊಂಡಿತು)